DREAM a DREAM

# ಪರಿವರ್ತನೆಯ ಕಥೆಗಳು -

## ಜೀವನ ಕೌಶಲ್ಯಗಳನ್ನು ಉತ್ತೇಜಿಸುವ ಶಿಕ್ಷಕರ ನಿರೂಪಣೆ



# ಡ್ರೀಮ್ ಎ ಡ್ರೀಮ್

1999ರಲ್ಲಿ ಪ್ರಾರಂಭವಾದ ಡ್ರೀಮ್ ಎ ಡ್ರೀಮ್ ನೋಂದಾಯಿತ, ಚಾರಿಟೆಬಲ್ ಟ್ರಸ್ಟ್ ಆಗಿದ್ದು, ದುರ್ಬಲ ಹಿನ್ನೆಲೆಯುಳ್ಳ ಮಕ್ಕಳು ಮತ್ತು ಯುವಜನರು ಎದುರಿಸುತ್ತಿರುವ ಪ್ರತಿಕೂಲತೆಯನ್ನು ತಡೆಗಟ್ಟಲು ಹಾಗೂ 21ನೇ ಶತಮಾನದಲ್ಲಿ ಸೃಜನಶೀಲ ಜೀವನ ಕೌಶಲ್ಯಗಳನ್ನು ಅವರಲ್ಲಿ ಬೆಳಸಿ, ಅಭಿವೃದ್ಧಿ ಹೊಂದಲು ಸಹಕರಿಸುತ್ತದೆ.

ಪ್ರಸ್ತುತ, ನಾವು ಶಾಲಾ ನಂತರ ಜೀವನ ಕೌಶಲ್ಯ ಕಾರ್ಯಕ್ರಮ (After School Life Skills Programme) ಮತ್ತು ವೃತ್ತಿ ಸಂಪರ್ಕ ಕಾರ್ಯಕ್ರಮದ (Career Connect Programme) ನಮ್ಮ 2 ಆವಿಷ್ಕಾರಗಳ ಪ್ರಯೋಗಾಲಯಗಳ ಮೂಲಕ ವರ್ಷದಲ್ಲಿ 10,000 ಯುವ ಜನರೊಂದಿಗೆ ಕೆಲಸ ಮಾಡುತ್ತಿದ್ದೇವೆ. ದೆಹಲಿ ಮತ್ತು ಜಾರ್ಖಂಡ್ ರಾಜ್ಯಗಳ ಸರಕಾರಗಳೊಂದಿಗೆ ಪಾಲುದಾರ ಕಾರ್ಯತಂತ್ರದ ಮೂಲಕ 7700 ಕ್ಕೂ ಹೆಚ್ಚು ಶಿಕ್ಷಕರನ್ನು/ಪ್ರಶಿಕ್ಷಕರನ್ನು ತರಬೇತಿಗೊಳಿಸಿದ್ದೇವೆ. ಸುಮಾರು 206 ಪಾಲುದಾರರು ಈ ಕಾರ್ಯದಲ್ಲಿ ಸಹಕರಿಸಿದ್ದರು. 1,92,500ಕ್ಕೂ ಹೆಚ್ಚು ಮಕ್ಕಳು ಸುಮಾರು ಒಂದು ಮಿಲಿಯಕ್ಕೂ ಹೆಚ್ಚು ಮಕ್ಕಳನ್ನು ಪ್ರಭಾವಿಸಿದ್ದಾರೆ. ನಾವು ಸಹಭಾಗಿತ್ವ ವಿಧಾನ ಮೂಲಕ ಸ್ಥಳೀಯ ದತ್ತಿಗಳು, ಕಾರ್ಪೊರೇಟ್ಸ್ ಗಳು, ಸ್ವಯಂಸೇವಕರು, ಸರ್ಕಾರಗಳು, ತಜ್ಞ ಸಲಹೆಗಾರರೊಂದಿಗೆ ಮತ್ತು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕಾರ್ಯತಂತ್ರ ಪಾಲುದಾರರ ಜೊತೆಗೂಡಿ ಕೆಲಸ ಮಾಡುವುದರಲ್ಲಿ ಬಲವಾದ ನಂಬಿಕೆಯಿರಿಸಿದ್ದೇವೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ/ಭೇಟಿ ಮಾಡಿ: www.dreamadream.org

ಸಂಪಾದಕರು: ಪವಿತ್ರ ರಾಜಗೋಪಾಲ್ | ಮುಖಪುಟ ಚಿತ್ರಗಾರರು: ಪ್ರಸನ್ನ ಎಚ್ | ಸಚಿತ್ರ ವಿವರಣೆಗಾರರು: ಮರಿಯಾ ಜಾಯ್ (create@storieswithus.co)

# ಜೀವನ ಕೌಶಲ್ಯಗಳ ಸಮರ್ಥಕರು

22 ವರ್ಷಗಳ ಹಿಂದೆ, 11 ಜನರು ಒಂದು ವಿಚಾರಕ್ಕಾಗಿ ಒಟ್ಟಾದರು. ಚಿಂತಾಜನಕ ಸ್ಥಿತಿಯಲ್ಲಿದ್ದ, ತೊರೆಯಲ್ಪಟ್ಟ ಮತ್ತು ಎಚ್.ಐ.ವಿ ಸೋಂಕಿತ ಮಕ್ಕಳಿಗಾಗಿ ಆಟ ಮತ್ತು ಚಟುವಟಿಕೆಗಳ ಜೊತೆಗೆ ಅವರು ಸಂತೋಷ ಮತ್ತು ಭರವಸೆಯನ್ನು ಪುನಃ ಅನುಭವಿಸಲು ಸಹಾಯ ಮಾಡುವ ಉದ್ದೇಶದಿಂದ ತಮ್ಮ ಸಮಯವನ್ನು ಸ್ವಯಂ ಮೀಸಲಿಡಲು ತೀರ್ಮಾನಿಸಿದರು. ಕಾಳಜಿ ಮತ್ತು ಅರ್ಥಪೂರ್ಣ ತೊಡಗಿಸಿಕೊಳ್ಳುವಿಕೆಯನ್ನು ತೋರ್ಪಡಿಸುವ ಜನರೊಡನೆ ಅಗತ್ಯವಾಗಿ ಬೆಂಬಲ ಬೇಕಾಗಿರುವ ಮಕ್ಕಳನ್ನು ತರುವುದು ಇವರ ಉದ್ದೇಶವಾಗಿತ್ತು. ಪ್ರತಿಯೊಬ್ಬ ಮನುಷ್ಯನಲ್ಲಿರುವ ವಿಭಿನ್ನ ವ್ಯತ್ಯಾಸಗಳನ್ನು, ಹಿನ್ನೆಲೆಯನ್ನು ಪರಿಗಣಿಸದೆ, ಪ್ರಶಂಸಿಸಬೇಕೆಂಬುದು ಪ್ರಮುಖ ನಂಬಿಕೆಯಾಗಿತ್ತು. ಈ ಉದ್ದೇಶವು ಒಂದು ದಿನ ಜಾಗತಿಕ ಚಳುವಳಿಯಾಗುವುದೆಂದು ಯಾರೂ ಕೂಡ ಊಹಿಸಿದ್ದಿರಲಿಲ್ಲ ಎಂಬುದನ್ನು ನಾನು ಬಹಳ ಎಚ್ಚರಿಕೆಯಿಂದಲೇ ಹೇಳಬಲ್ಲೆ.

240 ಕ್ಕೂ ಹೆಚ್ಚು ನೌಕರರನ್ನು ಡ್ರೀಮ್ ಎ ಡ್ರೀಮ್ ತನ್ನ ಪ್ರಾರಂಭದಿಂದಲೂ ಹೊಂದಿದೆ. ಸಂಸ್ಥೆಯು 10000ಕ್ಕೂ ಹೆಚ್ಚು ಸ್ವಯಂಸೇವಕರೊಡನೆ ತೊಡಗಿಸಿಕೊಂಡಿದೆ ಮತ್ತು ಸಲಹೆಗಾರರನ್ನು, ಮಾರ್ಗದರ್ಶಕರನ್ನು, ಮಂಡಳಿಯ ಸದಸ್ಯರನ್ನು, ದಾನಿಗಳನ್ನು, ಸಮಾಲೋಚಕರುಗಳ ಸಮೂಹದೊಡನೆಯೂ ತೊಡಗಿಸಿಕೊಂಡಿದೆ. ಸುಮಾರು 3 ಮಿಲಿಯನ್‌ಗೂ ಹೆಚ್ಚಿನ ಮಕ್ಕಳ ಹಾಗೂ ಯುವಜನರ ಜೀವನವನ್ನು ಇದು ಪ್ರಭಾವಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಯುವಜನರಿಗೆ ಬೆಂಬಲವಾಗಿ ಮತ್ತು ಅವರ ಭವಿಷ್ಯಕ್ಕಾಗಿ ನಾವು ಅವರೊಡನೆ ಇಂದು ಸಾಗುತ್ತಿದ್ದೇವೆ ಎನ್ನುವುದನ್ನು ಬಹಳ ಹೆಮ್ಮೆಯಿಂದ ಪ್ರತಿಪಾದಿಸುತ್ತಿದ್ದೇವೆ.

ಡ್ರೀಮ್ ಎ ಡ್ರೀಮ್ 20ನೇ ವರ್ಷವು ನಮಗೆ ಪ್ರಮುಖ ಬದಲಾವಣೆಯ ಸಮಯವಾಗಿದೆ. ಶೈಕ್ಷಣಿಕ ಪರಿಸರ ವ್ಯವಸ್ಥೆಯ ಎಲ್ಲಾ ಭಾಗಗಳಲ್ಲಿ ಜೀವನ ಕೌಶಲ್ಯಗಳನ್ನು ಅದರಲ್ಲಿಯೂ ಪ್ರಮುಖವಾಗಿ ದೇಶದ ಎಲ್ಲಾ ಪಬ್ಲಿಕ್ ಶಾಲೆಗಳಲ್ಲಿ ಇದರ ಬಗ್ಗೆ ವ್ಯವಸ್ಥಿತ ಹೂಡಿಕೆಯನ್ನು ಕಂಡ ವರ್ಷ ಇದಾಗಿದೆ. ದೆಹಲಿ ಸರ್ಕಾರದ ಸಹಯೋಗದೊಂದಿಗೆ 2018ರಲ್ಲಿ ಸಂತೋಷದಾಯಕ ಪಠ್ಯಕ್ರಮವನ್ನು ಪರಿಚಯಿಸುವುದು ಮುಂಚೂಣಿಯ ಕ್ಷಣವಾಗಿತ್ತು ಮತ್ತು ಅಂದಿನಿಂದ ಹಲವು ರಾಜ್ಯ ಸರ್ಕಾರಗಳು ತಮ್ಮ ಶಾಲಾ ಪಂಚಾಂಗದಲ್ಲಿ ಜೀವನ ಕೌಶಲ್ಯಾಧಾರಿತ ಬೋಧನಾ ಕಲೆಗಳನ್ನು /ಶಿಕ್ಷಣಶಾಸ್ತ್ರವನ್ನು ಸಂಯೋಜಿಸುವ ಮಹತ್ವವನ್ನು ಗುರುತಿಸಿವೆ. ಜೀವನ ಕೌಶಲ್ಯ ವಿಧಾನದಲ್ಲಿ ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸಲು ಶಾಲೆಗಳು ನಮ್ಮನ್ನು ತಲುಪುತ್ತಿರುವುದನ್ನು ನಾವು ನೋಡಿದ್ದೇವೆ ಮತ್ತು ಎಸ್‌ಇಎಲ್ ಮತ್ತು ಜೀವನ ಕೌಶಲ್ಯಾಧಾರಿತ ಮಧ್ಯಸ್ಥಿಕೆಗಳ ಪ್ರಭಾವದ ಬಗ್ಗೆ ಜಾಗತಿಕವಾಗಿ ದಕ್ಷಿಣದಿಂದ ಹೊರಬರುವ ಹೊಸ ಸಂಶೋಧನೆಗಳಿಗೆ ನಾವು ಕೊಡುಗೆ ನೀಡಿದ್ದೇವೆ.

ವೈಯಕ್ತಿಕ, ಸಾಮಾಜಿಕ ಮತ್ತು ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಹೊಂದಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸುವಲ್ಲಿ ಯೋಗಕ್ಷೇಮ ಮತ್ತು ಜೀವನ ಕೌಶಲ್ಯಗಳು ಅಗತ್ಯವೆನ್ನುವುದನ್ನು ಸ್ವೀಕರಿಸಿರುವ ಭಾವನೆಯಲ್ಲಿ ನಾವಿದ್ದೇವೆ. ಬದ್ಧತೆಯುಳ್ಳ ದಾನಿಗಳು, ಸಹಭಾಗಿತ್ವವನ್ನು ಹೊಂದಿರುವ ಪಾಲುದಾರರು, ಸರಕಾರಗಳು, ದೀರ್ಘಕಾಲದ ಬೆಂಬಲಿಗರು ಮತ್ತು ಸುಸ್ಥಿರ ಅಭಿವೃದ್ಧಿ ಗುರಿ 4(SDG4)ಯೊಡನೆ ಸಾಗುವ ಜಾಗತಿಕ ಕರೆಗಳಿಂದ ಇದು ಉತ್ತೇಜಿಸಲ್ಪಟ್ಟು, ಇದುವರೆಗಿನ ನಮ್ಮ ಅತ್ಯುತ್ತಮ ವರ್ಷಗಳಲ್ಲಿ ಒಂದಾಗಿದೆ.

ಈ ನಿರೂಪಣೆಯನ್ನು ರೂಪಿಸುವಲ್ಲಿ ನಾವು ವಹಿಸುವ ಪಾತ್ರದ ಬಗ್ಗೆ ಇದು ಖಂಡಿತವಾಗಿ ನಮಗೆ ಹೆಚ್ಚು ಅರಿವು ಮತ್ತು ವಿನಮ್ರತೆಯನ್ನುಂಟು ಮಾಡಿದೆ. ಭಾರತ ಮತ್ತು ಜಾಗತಿಕವಾಗಿ ಎರಡೂ ಕಡೆ ಎಲ್ಲಾ ಯುವಜನರಲ್ಲಿ, ಅದರಲ್ಲಿಯೂ ಮುಖ್ಯವಾಗಿ, ದುರ್ಬಲ ಹಿನ್ನೆಲೆಯುಳ್ಳವರು ಪ್ರಪಂಚದಲ್ಲಿ ಯಶಸ್ವಿಯಾಗಲು ಅಗತ್ಯವಾಗಿ ಬೇಕಾಗಿರುವ ಕೌಶಲ್ಯ, ಸಾಧನಗಳು ಮತ್ತು ಪರಿಸರದ ಪ್ರವೇಶಾವಕಾಶ ಪಡೆಯಲು ನಾವು ಈ ಆಲೋಚನೆಯ ನಾಯಕರಾಗಿ, ಬದಲಾವಣೆಯ ಹರಿಕಾರರಾಗಿ, ಮನಸ್ಥಿತಿಗಳನ್ನು ಬದಲಾಯಿಸುವವರಾಗಿ, ಸಂಭಾಷಣೆಯನ್ನು ಮುಂದುವರೆಸುವವರಾಗಿ ಮುಂದುವರೆಯುತ್ತಿದ್ದೇವೆ.

ಸುಚೇತಾ ಭಟ್,
ಸಿಇಒ, ಡ್ರೀಮ್ ಎ ಡ್ರೀಮ್

# ಪರಿವಿಡಿ

ಮುನ್ನುಡಿ ....................................................4

ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮ ....................................5

- ನಮ್ಮ ವ್ಯಾಪ್ತಿ ....................................................5
- ನಮ್ಮ ವಿಧಾನ ....................................................7
- ನಮ್ಮ ಪ್ರಭಾವ ....................................................8

ಜೀವನ ಕೌಶಲ್ಯಗಳನ್ನು ಉತ್ತೇಜಿಸುವ ಶಿಕ್ಷಕರ ನಿರೂಪಣೆ................................13

# ಮುನ್ನುಡಿ

ಜಾಗತಿಕವಾಗಿ ಕೊರೋನಾ ಸಾಂಕ್ರಾಮಿಕ ಪರೀಕ್ಷೆಯನ್ನು ಎದುರಿಸಿದ ನಂತರ, 21 ನೇ ಶತಮಾನಕ್ಕೆ ಭವಿಷ್ಯದ ಸಿದ್ಧತೆ ಮತ್ತು ಸಾಂಕ್ರಾಮಿಕ ಪುರಾವೆ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸುವ ಅವಶ್ಯಕತೆಯಿದೆ ಎಂಬುದು ಸ್ಪಷ್ಟವಾಗಿದೆ. ಇದಲ್ಲದೆ, ಸಾಂಕ್ರಾಮಿಕ ರೋಗದಿಂದ ಉಂಟಾಗುವ ಹಾನಿಯು ಬೆಳವಣಿಗೆಯ ಮೈಲಿಗಲ್ಲುಗಳನ್ನು ಸಾಧಿಸುವ ಮಕ್ಕಳ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಇದರಿಂದಾಗುವ ಪರಿಣಾಮವನ್ನು ನಾವು ಅಭಿವೃದ್ಧಿ ಹೊಂದಲು ವಿಫಲವಾಗಿದೆ ಅಥವಾ ಕುಂಠಿತಗೊಳಿಸುತ್ತದೆ ಎಂದು ಕರೆಯುತ್ತೇವೆ.

ಆದ್ದರಿಂದ, ಯಾವುದು ಮಕ್ಕಳನ್ನು ಭವಿಷ್ಯಕ್ಕಾಗಿ ಸಿದ್ಧಪಡಿಸುತ್ತದೆ ಮತ್ತು ಅವರ ಅಭಿವೃದ್ಧಿ ಹೊಂದಲು ಯಾವುದು ಸಹಾಯ ಮಾಡುತ್ತದೆ? ಯುವಜನರೊಂದಿಗೆ ಕೆಲಸ ಮಾಡಿದ ನಮ್ಮ ಎರಡು ದಶಕಗಳ ಅನುಭವದಿಂದ, ಅನುಭೂತಿ ಹೊಂದಿದ ವಯಸ್ಕರು ಮತ್ತು ಸುರಕ್ಷಿತ ಸ್ಥಳಗಳು ಯುವಜನರಿಗೆ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅನ್ವೇಷಿಸಲು ಮತ್ತು ಪ್ರತಿಕೂಲ ಪರಿಸ್ಥಿತಿಯ ಹೊರತಾಗಿಯೂ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುತ್ತದೆ ಎಂದು ನಾವು ಕಂಡುಕೊಂಡಿದ್ದೇವೆ. 2012 ರಲ್ಲಿ, ನಾವು ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ ಮತ್ತು ತರಗತಿ ಪರಿಸರದಲ್ಲಿ ಶಿಕ್ಷಕರು ಹೇಗೆ ಹೆಚ್ಚು ಅನುಭೂತಿ ಮತ್ತು ಸೃಜನಶೀಲತೆಯನ್ನು ತರಬಹುದು ಎಂಬುದರ ಕುರಿತು ಶಿಕ್ಷಕರೊಡನೆ ಕೆಲಸ ಮಾಡಲು ಪ್ರಾರಂಭಿಸಿದ್ದೇವೆ.

ಶಿಕ್ಷಕರು ಕಾಳಜಿಯುಳ್ಳ ಮತ್ತು ಸಹಾನುಭೂತಿಯುಳ್ಳ ವಯಸ್ಕರಾಗುವ ಮೂಲಕ ಮಕ್ಕಳಿಗೆ ಸರಿಯಾದ ವಾತಾವರಣ ಮತ್ತು ಕಲಿಕೆಯ ಸ್ಥಳವನ್ನು ಸೃಷ್ಟಿಸುತ್ತಾರೆ. ನಮ್ಮ ಕಾರ್ಯಕ್ರಮದುದ್ದಕ್ಕೂ ಇದ್ದ ಒಬ್ಬ ಶಿಕ್ಷಕ ನಮ್ಮ ಬಳಿ ಬಂದು, ಇದನ್ನು ನಮ್ಮೊಡನೆ ಹಂಚಿಕೊಂಡರು- “ನನ್ನ ತರಗತಿಯಲ್ಲಿ ಸತತವಾಗಿ ತಡವಾಗಿ ಬರುವ ಹುಡುಗಿಯಿದ್ದಾಳೆ ಮತ್ತು ಪ್ರತಿಬಾರಿ ಅವಳು ನನ್ನ ತರಗತಿಗೆ ತಡವಾಗಿ ಬಂದಾಗ, ನಾನು ಅವಳನ್ನು ಹೊರಗೆ ಕಳುಹಿಸುತ್ತಿದ್ದೆ. ಈ ಕಾರ್ಯಕ್ರಮದ ನಂತರ ಮುಂದಿನ ಬಾರಿ, ನನ್ನ ತರಗತಿಗೆ ವಾಪಾಸು ಹೋದಾಗ, ಆ ಹುಡುಗಿ ಪುನಃ ತಡವಾಗಿ ಬಂದಳು. ನಾನು ಅವಳೊಡನೆ ಕುಳಿತೆ ಮತ್ತು ನೀನು ತಡವಾಗಿ ಏಕೆ ಬರುತ್ತೀಯಾ ಎಂದು ನಾನು ತಿಳಿಯಬಯಸುವೆ ಎಂದು ಹೇಳಿದೆ. ಈ ಪ್ರಶ್ನೆಯನ್ನು ನಾನೆಂದೂ ಕೇಳಿರಲಿಲ್ಲವಾದುದರಿಂದ ಅವಳು ಆಘಾತಕ್ಕೊಳಗಾದಳು.  ಅವಳು ಧೈರ್ಯದಿಂದ ತಾನು ಬೇಗನೆ ಏಳುವೆ, ಗ್ರಹಕೃತ್ಯಗಳಲ್ಲಿ ತಂದೆ ತಾಯಿಗಳಿಗೆ ಸಹಾಯ ಮಾಡುವೆ ಮತ್ತು ಶಾಲೆಗೆ ಸರಿಯಾದ ವೇಳೆಗೆ ತಲುಪಲು ಧಾವಿಸುವೆನೆಂದಳು. ಮನೆಯಲ್ಲಿ ಗಡಿಯಾರವಿರದುದರಿಂದ ಅವಳು ತಡವಾಗಿ ತಲುಪುವಳು. ಇದು ನಿಜವಾಗಿಯೂ ನನ್ನನ್ನು ಸ್ಪರ್ಶಿಸಿತು, ಅಂದಿನಿಂದ ನಾನು ಸದಾ ನನ್ನ ಮಕ್ಕಳ ಮಾತನ್ನು ಆಲಿಸುವೆ”.

ಇದು ಶಿಕ್ಷಕರಿಗೆ ಪರಿವರ್ತನಾ ಕ್ಷಣವಾಗಿತ್ತು. ಏಕೆಂದರೆ, ಇದುವರೆಗೂ ಅವರು ಹುಡುಗಿಗೆ ಕಲಿಕೆಯಲ್ಲಿ ಆಸಕ್ತಿಯಲ್ಲವೆಂದು ನಂಬಿದ್ದರು ಮತ್ತು ಆ ಕ್ಷಣದಲ್ಲಿ, ಅವಳು ಆಳವಾದ ಬದ್ಧತೆಯನ್ನು ಹೊಂದಿದ್ದಾಳೆ ಆದರೆ ತನ್ನ ನಿಯಂತ್ರಣಕ್ಕೆ ಮೀರಿದ ಪರಿಸ್ಥಿತಿಯಿಂದಾಗಿ ಅವಳು ತಡವಾಗಿದ್ದಾಳೆ ಎನ್ನುವುದನ್ನು ಕಂಡುಕೊಂಡರು. ಅಂತಹ ವಯಸ್ಕ ಗ್ರಹಿಕೆ ಮಗುವಿಗೆ ಪರಿವರ್ತನಾ ಅನುಭವದ ಆರಂಭವಾಗಿದೆ. ಆದ್ದರಿಂದ, ಜೀವನ ಕೌಶಲ್ಯಗಳಲ್ಲಿ ಶಿಕ್ಷಕರು ತರಬೇತಿ ಹೊಂದಿರುವುದು ಮುಖ್ಯ, ಮತ್ತು ಅದಕ್ಕೆ ಪ್ರತಿಯಾಗಿ ವಿದ್ಯಾರ್ಥಿಗಳೂ ಅವುಗಳನ್ನು ಅತ್ಯುತ್ತಮವಾಗಿ ಕಲಿಯಬಹುದು.

ಡ್ರೀಮ್ ಎ ಡ್ರೀಮ್‌ನಲ್ಲಿ, ನಮ್ಮ ವಿಧಾನವು ಶಿಕ್ಷಣವನ್ನು ಮರುರೂಪಿಸುವುದು, ಅಂದರೆ ಜೀವನ ಕೌಶಲ್ಯಗಳು ಮುಖ್ಯವಾಗಿದ್ದು, ಇದು ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಮಕ್ಕಳು ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುತ್ತದೆ. ಜೀವನ ಕೌಶಲ್ಯದಲ್ಲಿ ಸಜ್ಜಾದ ಶಿಕ್ಷಕರು ಮಗುವಿನಲ್ಲಿ ಮತ್ತು ತಮ್ಮಲ್ಲಿ ಹೇಗೆ ಆಳವಾದ ಶಾಶ್ವತ ಪರಿಣಾಮವನ್ನು ಉಂಟುಮಾಡುತ್ತಾರೆ ಎಂಬುದಕ್ಕೆ ಈ ಪುಸ್ತಕವು ಸಾಕ್ಷಿಯಾಗಿದೆ.

ಭವಾನಿ ಆರ್ಮುಗಂ
ಸಹ ನಿರ್ದೇಶಕರು, ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮ



# ಶಿಕ್ಷಕರ ಅಭಿವೃದ್ಧಿ ಕಾರ್ಯ ಕ್ರಮ


ಡ್ರೀಮ್ ಎ ಡ್ರೀಮ್ ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮವು (ಟಿಡಿಪಿ) ಯುವ ಜನರಲ್ಲಿ ಹುದುಗಿರುವ ಸಾಮರ್ಥ್ಯವನ್ನು ಹೊರತರಲು ಮತ್ತು ಅವುಗಳನ್ನು ಆಳವಾಗಿ ಪ್ರಭಾವಿಸಲು ಶಿಕ್ಷಣ ತಜ್ಞರು ಮತ್ತು ಶಿಕ್ಷಕರೊಡನೆ ಕೆಲಸ ಮಾಡುತ್ತದೆ. ನಾವು ಸೃಜನಶೀಲ ಜೀವನ ಕೌಶಲ್ಯ ವಿಧಾನವನ್ನು ಬಳಸಿಕೊಂಡು ಅನುಭೂತಿ, ಸೃಜನಶೀಲತೆ, ಆಲಿಸುವಿಕೆ ಮತ್ತು ಮೌಲ್ಯೀಕರಣ, ಅಧಿಕೃತ ಹಂಚಿಕೆ ಮತ್ತು ಸುಗಮಗಾರಿಕೆಗಳಂತಹ ಸಾಮರ್ಥ್ಯಗಳನ್ನು ಹೊರತರುವಲ್ಲಿ ಕಾರ್ಯನಿರತರಾಗಿದ್ದೇವೆ. ಯುವಜನರು ಪ್ರತಿದಿನವೂ ಎದುರಿಸುವ ಸವಾಲುಗಳಿಗೆ ಎದುರಾಗಲು ಸಾಧ್ಯವಾಗುವಂತಹ ಕಲಿಕಾ ವಾತಾವರಣವನ್ನು ತೊಡಗಿಸಿಕೊಳ್ಳುವುದನ್ನು ಸೃಷ್ಟಿಸಲು ಶಿಕ್ಷಕರು ಕಲಿಯುತ್ತಾರೆ. ಈ ವಿಧಾನವನ್ನು ಯುವ ಸಬಲೀಕರಣ (PYE) ಪಾಲುದಾರರಿಂದ ಅಭಿವೃದ್ಧಿಯಾಗಿರುವ ಸೃಜನಶೀಲ ಸಮುದಾಯ ಮಾದರಿಯಿಂದ ಅಳವಡಿಸಿಕೊಳ್ಳಲಾಗಿದೆ.


ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮವನ್ನು 6 ರಿಂದ 8 ತಿಂಗಳುಗಳ ಅವಧಿಯಲ್ಲಿ 4 ಜೀವನ ಕೌಶಲ್ಯಗಳ ಸುಗಮಗಾರಿಕೆಯ ಕಾರ್ಯಗಾರ ಸರಣಿಯ ಮೂಲಕ ಕೈಗೊಳ್ಳಲಾಗಿದೆ. ಪ್ರತಿಯೊಂದು ಕಾರ್ಯಗಾರವು 2 ದಿನಗಳಿಗಾಗಿ ಮೀಸಲಾಗಿದ್ದು, ಈ ಕೆಳಗಿನವುಗಳ ಮೇಲೆ ಕೇಂದ್ರೀತವಾಗಿದೆ.


- ಅರ್ಥೈಸುವಿಕೆಗಾಗಿ ಕಲಿಕೆ ಮತ್ತು ಪ್ರತಿಯೊಬ್ಬರ ಸೃಜನಶೀಲ ಸಾಮರ್ಥ್ಯದ ಅಭಿವ್ಯಕ್ತಿ
- ಅನುಭೂತಿಯೊಂದಿಗೆ ಯುವ ಜನರನ್ನು ತೊಡಗಿಸಿಕೊಳ್ಳುವುದು ಮತ್ತು ಅರ್ಥೈಸಿಕೊಳ್ಳುವುದು
- ಯುವ ಜನರು ಸುಗಮಗಾರಿಕೆಯ ಕೌಶಲ್ಯಗಳನ್ನು ಹೇಗೆ ಕಲಿಯುವರು ಮತ್ತು ಅಭಿವೃದ್ಧಿಪಡಿಸುವರೆಂಬ ತಿಳಿವಳಿಕೆಯನ್ನು ಆಳವಾಗಿಸುವುದು
- ಯುವ ವ್ಯಕ್ತಿಯ ಜೀವನದಲ್ಲಿ ಒಬ್ಬರ ಪಾತ್ರವನ್ನು ಆಚರಿಸುವುದು

# ನಮ್ಮ ವ್ಯಾಪ್ತಿ


ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮವನ್ನು 2012ರಲ್ಲಿ ಒಂದು ಪರಿಕಲ್ಪನೆಯಾಗಿ ರೂಪಿಸಲಾಯಿತು. ಅಲ್ಲಿಯವರೆಗೂ, ನಾವು 235 ವಿಭಿನ್ನ ಪಾಲುದಾರ ಶಾಲೆಗಳು ಹಾಗೂ ಸಂಸ್ಥೆಗಳಿಂದ 1,21,200 ಯುವ ಜನರನ್ನು ಪ್ರಭಾವಿಸುತ್ತಾ, 4848 ಶಿಕ್ಷಕರನ್ನು ತಲುಪಿದ್ದೇವೆ







## ಕಾರ್ಯಕ್ರಮವನ್ನು ಸಂಪೂರ್ಣ ಗೊಳಿಸಿದ ಶಿಕ್ಷಕರ ಹಂಚಿಕೆ*





## ಶಿಕ್ಷಕರ ಚಿತ್ರಣ *

### ಶಿಕ್ಷಕರ ಶ್ರೇಣಿ ಹಂಚಿಕೆ




### ಲಿಂಗವಾರು ಶಿಕ್ಷಕರು





* 2018-19ರಲ್ಲಿ ಮಾದರಿಯಿಂದ



# ನಮ್ಮ ವಿಧಾನ

ಶಿಕ್ಷಕರ ಜೀವನ ಕೌಶಲ್ಯ ಸುಗಮಗಾರಿಕೆ ಕಾರ್ಯಗಾರವನ್ನು ಸೃಜನಶೀಲ ಸುಗಮಗಾರಿಕೆ ಮತ್ತು ಕಮಾನಿನಂತೆ ಮಾರ್ಪಾಡುಗೊಳ್ಳುವ (AOT - arc of transformation) ವಿನ್ಯಾಸಗಳಿಂದ ರೂಪಿಸಲಾಗಿದೆ. ಕಮಾನಿನಂತೆ ಮಾರ್ಪಾಡುಗೊಳ್ಳುವ ಸಮಯ ಅವಕಾಶಗಳನ್ನು ಹಿಡಿದಿಟ್ಟುಕೊಳ್ಳುವ ಪ್ರಕ್ರಿಯೆ. ಇದು ಒಂದು ಚಟುವಟಿಕೆ ಅಥವಾ ಗುಂಪು ಚರ್ಚೆಯಲ್ಲ, ಇದು ಒಂದು ಟೂಲ್ ಕಿಟ್ ಅಥವಾ ಪಠ್ಯಕ್ರಮ ವಲ್ಲ, ಇದು ಒಂದು ಪ್ರಕ್ರಿಯೆಯಾಗಿದ್ದು, ಇದರಿಂದ ಸುಗಮಗಾರಾರು ಪರಿವರ್ತನೆಗೆ ಅವಧಿಯನ್ನು ಹಿಡಿದಿಟ್ಟುಕೊಳ್ಳುವುದಾಗಿದೆ. ಇದು ಒಂದು 'ಬಾಗುವ' ಸಮಯವಾಗಿದೆ. ಏಕೆಂದರೆ ನೀವು ಒಮ್ಮೆ ಕಮಾನಿನ ಒಂದು ಕಡೆ ಇರುವುದೇ ಆದರೆ, ಹಿಂದಿರುಗುವ ಪ್ರಮೇಯವೇ ಇಲ್ಲ.




*ಡ್ರೀಮ್ ಎ ಡ್ರೀಮ್ ಹಾಗೂ ಯುವ ಸಬಲೀಕರಣ ಪಾಲುದಾರರಿಂದ ಈ ಮಾರ್ಪಾಡುಗೊಳ್ಳುವ ಕಮಾನು ವಿಧಾನವನ್ನು ಅಭಿವೃದ್ಧಿಗೊಳಿಸಲಾಗಿದೆ.*

ಮಾರ್ಪಾಡುಗೊಳ್ಳುವ ಕಮಾನು ವಿಧಾನದ ಪ್ರಕ್ರಿಯೆಯು 4 ಮುಖ್ಯ ಘಟಕಗಳನ್ನು ಹೊಂದಿದೆ. ನಮ್ಮ ರಕ್ಷಣೆಗೆ ಸಹಾಯ ಮಾಡಲು, ಪರಸ್ಪರ ಸಂಪರ್ಕಿಸಲು ಮತ್ತು ಪ್ರಕ್ರಿಯೆಯ ವಿಶ್ವಾಸಕ್ಕೆ ಸಹಾಯ ಮಾಡಲು ಕನಿಷ್ಟ ಸೃಜನಶೀಲ ಅಪಾಯವನ್ನು ತೆಗೆದುಕೊಳ್ಳುವ ಮೂಲಕ ನಾವು ಪ್ರಬಲ ಆರಂಭವನ್ನು ಸೃಷ್ಟಿಸುತ್ತಾ ಪ್ರಾರಂಭಿಸುತ್ತೇವೆ. ಇದು ಗಂಭೀರ ಪರಿಣಾಮವನ್ನು ಹೊಂದಿರುವ ಅನುಭವವನ್ನು ನಂತರ ನೀಡುತ್ತದೆ. ಕಲೆ ಅಥವಾ ಕ್ರೀಡೆ, ಅಥವಾ ಇನ್ಯಾವುದೇ ಮಾಧ್ಯಮವನ್ನು ಬಳಸಿ ಸೃಷ್ಟಿಸಬಹುದಾದ ಅನುಭವವು ತನಗೆ ತಾನೇ ತೊಡಗಿಸಿಕೊಳ್ಳಲು, ಪೂರ್ವಾಗ್ರಹಪೀಡಿತವಾಗದ ರೀತಿಯಲ್ಲಿ ವ್ಯವಹರಿಸಲು ನೆರವಾಗುತ್ತದೆ. ಈ ಹಿಂದೆ ನಾವು ಇದನ್ನು ಮಾಡಿರಲಿಲ್ಲ. ಕೆಲವೊಮ್ಮೆ ನಮಗೆ ಕ್ಷುಲ್ಲಕ ಅಥವಾ ಅಸಮರ್ಪಕ ಎಂದು ಭಾವಿಸುವಂತೆ ಮಾಡುತ್ತದೆ. ಆದರೆ, ಅನುಭವವನ್ನು ಸುರಕ್ಷಿತ ಮತ್ತು ವಿಶ್ವಾಸಾರ್ಹ ಪರಿಸರದಲ್ಲಿ ಸೃಷ್ಟಿಸಿದಾಗ, ನಮ್ಮ ನಮ್ಮ ನಿಜವಾದ ಸ್ವಯಂ ಹೊರಹೊಮ್ಮುತ್ತದೆ. ಕಾರ್ಯಗಾರದ ಹೊರಗೆ, ನಾವು ನಿಜ ಜೀವನದಲ್ಲಿ ಇರುವಂತೆ ವರ್ತಿಸುತ್ತೇವೆ. ನಾವು ನಮ್ಮ ಒಳಧ್ವನಿಗಳನ್ನು ಆಲಿಸುತ್ತೇವೆ. ನಾವು ನಮ್ಮನ್ನು ಹೇಗಿದ್ದೇವೋ ಹಾಗೆ ಇರುವಂತೆ ಇರಲು ಬಯಸುತ್ತೇವೆ. ನಾವು ಎಷ್ಟೋ ಸಂಗತಿಗಳನ್ನು ಹೋಗಲಿ ಎಂದು ಬಿಟ್ಟು ಬಿಡುತ್ತೇವೆ. ಮುಂದಿನ ಹಂತವು ಪ್ರಬಲ ಅನುಭವವನ್ನು ವಿವರಿಸುವುದು ಅಥವಾ ಪುನರ್ ಮನನ ಮಾಡಿಕೊಳ್ಳುವುದು. ನಾವು ಯಾರು? ಮತ್ತು ಯಾವ ಸಾಮರ್ಥ್ಯ ಹೊಂದಿದ್ದೇವೆ? ನಮ್ಮನ್ನು ತಡೆಹಿಡಿಯುವ ಎಲ್ಲ ಆಂತರಿಕ ಧ್ವನಿಗಳನ್ನು ಹಾಗೂ ಪ್ರತಿಕೃತಿಗಳನ್ನು ಮೀರಿ ಯಾವಾಗ ಕಾಣುತ್ತೇವೆ ಮತ್ತು ಕೇಳುತ್ತೇವೆ ಎಂಬ ಆಳಕ್ಕೆ ನಾವು ಹೋಗುತ್ತೇವೆ. ಅಂತಿಮವಾಗಿ, ನಾವು ಎಂದಿಗೂ ಮರೆಯುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಪರಿವರ್ತನೆಯನ್ನು ಗುರುತಿಸುವುದರೊಂದಿಗೆ ಮುಕ್ತಾಯ ಮಾಡುತ್ತೇವೆ.

ಅತಿಮುಖ್ಯ ಘಟಕ: ಸುಗಮಗಾರಾರು ಈ ರೀತಿಯ ಪರಿವರ್ತನೆಯ ಅವಕಾಶವನ್ನು ಸೃಷ್ಟಿಸುವಲ್ಲಿ ಆದರ್ಶಪ್ರಾಯರಾಗಿರುತ್ತಾರೆ. ಇವೆಲ್ಲವೂ ಸುಗಮಗಾರಾರು ಅಧಿಕೃತ ಸ್ವಯಂ ಮತ್ತು ಪ್ರಬಲ ಅನುಭವದೊಂದಿಗೆ ಅವರಿಗೆ ತಮ್ಮ ನಿಜವಾದ ಸ್ವಯಂನ್ನು ಅನ್ವೇಷಿಸಲು ನೀಡುವ ಅವಕಾಶವೇ ಆಗಿದೆ.

ಇನ್ನಷ್ಟು ತಿಳಿಯಲು, ಈ 30 ನಿಮಿಷಗಳ ವೀಡಿಯೋವನ್ನು ವೀಕ್ಷಿಸಿ - https://www.youtube.com/watch?v=zZXji5uLC7Q

# ನಮ್ಮ ಪ್ರಭಾವ


## ಯುವ ಜನರಲ್ಲಿ ಜೀವನ ಕೌಶಲ್ಯಗಳ ಸುಧಾರಣೆ

ಮಕ್ಕಳ ಮೇಲಾಗುವ ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮ ದ ಪ್ರಭಾವವನ್ನು ಜೀವನ ಕೌಶಲ್ಯಗಳ ಮಾಪನ ಪ್ರಮಾಣ (LSAS)ವನ್ನು ಬಳಸಿ ಅಳೆಯಲಾಗುತ್ತದೆ. LSAS ಈ ರೀತಿಯಲ್ಲಿಯೇ ಮೊದಲನೆಯದಾಗಿದ್ದು, ಗುಂಪಿನಲ್ಲಿ ವಿಮರ್ಶೆಗಳಿಗೆ ಒಳಗಾಗಿದೆ. ಪ್ರಮಾಣೀಕರಿಸಲಾದ ಮತ್ತು ಅವಕಾಶವಂಚಿತ ಅಥವಾ ದುರ್ಬಲ ವರ್ಗದ ಮಕ್ಕಳ ಜೀವನ ಕೌಶಲ್ಯದಲ್ಲಿನ ಸುಧಾರಣೆಯನ್ನು ಅಳೆಯಲು ಪ್ರಪಂಚದ ಪ್ರಕಟಿತ ಪರಿಣಾಮ ಮಾಪನ ಸಾಧನವಾಗಿದೆ. ಜೀವನ ಕೌಶಲ್ಯ ಕಾರ್ಯಕ್ರಮದ ಆರಂಭ ಮತ್ತು ಕೊನೆಯಲ್ಲಿ ಪ್ರಸ್ತಾಪಿಸಲಾದ 5 ಜೀವನ ಕೌಶಲ್ಯಗಳನ್ನು ಅಳತೆ ಮಾಡಲು ಈ ಮಾಪನವು ಕಾರ್ಯಕ್ರಮ ಸುಗಮಕಾರರಿಂದ ಬಾಹ್ಯವಾಗಿ ನಿರ್ವಹಿಸಲ್ಪಡುವುದು.

ಜೀವನ ಕೌಶಲ್ಯ ಮೌಲ್ಯಮಾಪನ ವಿಶ್ಲೇಷಣೆಯು ಟಿಡಿಪಿಯಲ್ಲಿ 13 ಪಾಲುದಾರ ಶಾಲೆಗಳ ದತ್ತಾಂಶ ಗಳನ್ನು ಪ್ರಸ್ತುತಪಡಿಸುತ್ತದೆ. ಪಾಲುದಾರ ಶಾಲೆಗಳು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ರುವ ಕಡಿಮೆ-ಶಾಲಾ ಶುಲ್ಕದ ಖಾಸಗಿ ಶಾಲೆಗಳಾಗಿವೆ. ಶಿಕ್ಷಕರು ಎಲ್ಲಾ 4 ಜೀವನ ಕೌಶಲ್ಯಗಳ ಸುಗಮಗಾರಿಕೆಯ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ ಮತ್ತು ಮಕ್ಕಳಲ್ಲಿ ಧನಾತ್ಮಕ ಪ್ರಭಾವ ಉಂಟುಮಾಡುವಲ್ಲಿ ತಮ್ಮ ಕಲಿಕೆಯನ್ನು ತರಗತಿಕೋಣೆಯಲ್ಲಿ ಅಳವಡಿಸಿದ್ದಾರೆ. ಕೆಳಗೆ ಪ್ರಸ್ತುತಪಡಿಸಿರುವ ದತ್ತಾಂಶವು 2018-19 ರ ವರ್ಷದಲ್ಲಿ ನಡೆಸಲಾದ ವಿಶ್ಲೇಷಣೆ ಯಾಗಿದೆ.

ವಿಶ್ಲೇಷಣೆ ಗಾಗಿ, 1185 ದತ್ತಾಂಶಗಳ ಗುಂಪನ್ನು ಸಂಗ್ರಹಿಸಲಾಗಿದ್ದು, ಅದರಲ್ಲಿ 674 ಗಂಡು ಹಾಗೂ 511 ಹೆಣ್ಣು ಭಾಗವಹಿಸಿದ್ದಾರೆ. ಅವರು 8-16 ವಯಸ್ಸಿನವರು ಮತ್ತು 5-9ನೇ ತರಗತಿಯವರಾಗಿದ್ದಾರೆ.

### ಜೀವನ ಕೌಶಲ್ಯಗಳ ಸುಧಾರಣ




ಈ ವಿಶ್ಲೇಷಣೆಯು:

- ಭಾಗವಹಿಸಿದವರ ಸರಾಸರಿ ಅಂಕವು 2.2 ರಿಂದ 3.5 ಅಂಶಗಳಿಗೆ ಏರಿಕೆಯಾದ ವಿವರವನ್ನು ಒಳಗೊಂಡಿದೆ
- ಕಾರ್ಯಕ್ರಮದ ಆರಂಭದಲ್ಲಿ ಭಾಗವಹಿಸಿದ್ದ ಶೇ 8.9ರಷ್ಟು >=3 ಸರಾಸರಿ ಅಂಕ ಪಡೆದಿದ್ದು, ಕಾರ್ಯಕ್ರಮದ ಅಂತ್ಯದಲ್ಲಿ ಇದು ಶೇ. 80.8 ಗೆ ಸುಧಾರಿಸಿದೆ

### ಜೀವನ ಕೌಶಲ್ಯಗಳ ಅಂಕಗಳು

ಈ ಕೋಷ್ಟಕವು ಭಾಗವಹಿಸಿದವರ ಅಂಕದ ವಿವರವನ್ನು ಹೇಳುತ್ತದೆ. ಮೂಲ ಮತ್ತು ಅಂತಿಮ ಸಮೀಕ್ಷೆಯ ಆಧಾರದಲ್ಲಿ ಕಂಡುಬಂದ ಅವರ ಸುಧಾರಣೆಯನ್ನೂ ಕೂಡ ನೀಡುತ್ತದೆ

| ಜೀವನ ಕೌಶಲ್ಯಗಳು | ಮೂಲ ಸಮೀಕ್ಷೆ | ಅಂತಿಮ ಸಮೀಕ್ಷೆ | ಸುಧಾರಣೆ |
|---|---|---|---|
| ಇತರರೊಂದಿಗೆ ಸಂವಹನ ಮಾಡುವುದು | 2.3 | 3.5 | 1.2 |
| ತೊಂದರೆಗಳಿಂದ ಹೊರಬರುವುದು ಮತ್ತು ಸಮಸ್ಯೆಗಳನ್ನು ಪರಿಹರಿಸುವುದು | 2.1 | 3.4 | 1.3 |
| ಉಪಕ್ರಮಗಳನ್ನು ತೆಗೆದುಕೊಳ್ಳುವುದು | 2.2 | 3.5 | 1.3 |
| ಸಂಘರ್ಷವನ್ನು ನಿಭಾಯಿಸುವುದು | 2.0 | 3.3 | 1.3 |
| ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಪಾಲಿಸುವುದು | 2.3 | 3.6 | 1.3 |
| ಸರಾಸರಿ | 2.2 | 3.5 | 1.3 |

## 60 ಡೆಸಿಬಲ್ಸ್ ನಿಂದ ಬಾಹ್ಯ ಮೌಲ್ಯ ಮಾಪನ

2019ರಲ್ಲಿ, 60 ಡೆಸಿಬಲ್ ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮವನ್ನು ಒಂದು ಕಾರ್ಯಕ್ರಮವಾಗಿ ಹಾಗೂ ಶಿಕ್ಷಕರ ಮೇಲಿನ ಪ್ರಭಾವ ಎರಡನ್ನೂ ಅರ್ಥಮಾಡಿಕೊಳ್ಳಲು 200 ಶಿಕ್ಷಕರಿಗೆ ದೂರವಾಣಿ ಸಂದರ್ಶನವನ್ನು ನಡೆಸಿತು. 60 ಡೆಸಿಬಲ್ಸ್ ಒಂದು ಪ್ರಭಾವ ಮಾಪನ ಸಂಸ್ಥೆಯಾಗಿದ್ದು, ತಮ್ಮ ಶಿಕ್ಷಕರನ್ನು, ಪೂರೈಕೆದಾರರನ್ನು ಮತ್ತು ಫಲಾನುಭವಿಗಳನ್ನು ಅತ್ಯುತ್ತಮವಾಗಿ ಅರ್ಥೈಸಿಕೊಳ್ಳಲು ಪ್ರಪಂಚದಾದ್ಯಂತ ಇರುವ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ. ಅಧ್ಯಯನದ ಮುಖ್ಯಾಂಶಗಳನ್ನು ಈ ಕೆಳಗೆ ನೀಡಲಾಗಿದೆ.


### ಟಿಡಿಪಿ ಶಿಕ್ಷಕರು ಎಷ್ಟು ತೃಪ್ತರಾಗಿದ್ದಾರೆ?

ಟಿಡಿಪಿಯು ನಿವ್ವಳ ಪ್ರವರ್ತಕ ಅಂಕ 65ನ್ನು ಹೊಂದಿದ್ದು, ಅದು ಅತ್ಯುತ್ತಮ;
ಮತ್ತು ಜಾಗತಿಕ ಅಂಕಿ-ಅಂಶ ಮತ್ತು ಭಾರತದ ಸರಾಸರಿಗಿಂತಲೂ ಅಧಿಕವಾಗಿದೆ.

ನಿವ್ವಳ ಪ್ರವರ್ತಕ ಅಂಕ ತೃಪ್ತಿ ಮತ್ತು ನಿಷ್ಠೆಯ ಮಾಪಕವಾಗಿದೆ.
50ಕ್ಕೂ ಹೆಚ್ಚಿನ ಎಲ್ಲವನ್ನು ಅತ್ಯುತ್ತಮ ವೆಂದು ಪರಿಗಣಿಸಲಾಗಿದೆ.
ಋಣಾತ್ಮಕ ಅಂಕವನ್ನು ಸಾಧಾರಣವೆಂದು ಪರಿಗಣಿಸಲಾಗಿದೆ.
ಟಿಡಿಪಿಯ ಅಂಕವಾದ 65 ಅತ್ಯುತ್ತಮವಾಗಿದೆ.

**ನಿವ್ವಳ ಪ್ರವರ್ತಕ ಅಂಕ (ಎನ್ ಪಿಎಸ್)***

0-10 ರ ಮಾನದಂಡದಲ್ಲಿ, ನಿಮಗೆ ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮವನ್ನು ಸ್ನೇಹಿತ ಅಥವಾ ಕುಟುಂಬ ಸದಸ್ಯರಿಗೆ ಶಿಫಾರಸು ಮಾಡುವ ಸಾಧ್ಯತೆ ಹೇಗಿದೆ? (ಸಂಖ್ಯೆ=200)




ಎನ್ ಪಿ ಎಸ್ = %ಪ್ರವರ್ತಕರು (9-10 - ಶಿಫಾರಸು ಮಾಡಬಹುದಾದವರು) – % ಗಮನ ಸೆಳೆಯಬೇಕಾದವರು (0-6 - ಶಿಫಾರಸು ಮಾಡಬಹುದಾದವರು)

### ಎನ್ ಪಿಎಸ್ ಮಾನದಂಡಗಳು

ಆಯ್ದ ನೇರ ಡೇಟಾ ಮಾನದಂಡಗಳು
(n = 100+ಸಂಸ್ಥೆಗಳು; 25,000 + ಪ್ರತಿಕ್ರಿಯಿಸಿದವರು)

| | |
|---|---|
| ನೇರ ಡೇಟಾ ಜಾಗತಿಕ ಸರಾಸರಿ<br>100+ ಸಂಸ್ಥೆಗಳು | 42 |
| ಭಾರತದ ಸರಾಸರಿ<br>20+ ಸಂಸ್ಥೆಗಳು | 34 |
| ಶಿಕ್ಷಣ ವಲಯದ ಸರಾಸರಿ<br>40+ ಸಂಸ್ಥೆಗಳು | 42 |

## ಯಾವ ಫಲಿತಾಂಶಗಳು ಅನುಭವಕ್ಕೆ ಬಂದಿವೆ?

50% ಗೂ ಅಧಿಕ ಶಿಕ್ಷಕರಿಗೆ ಬೋಧನೆಯಲ್ಲಿ ಪ್ರಗತಿಯಾಗಿರುವುದು ಮತ್ತು ಅನುಭೂತಿಯಲ್ಲಿ ಏರಿಕೆಯಾಗಿರುವುದು ಅನುಭವಕ್ಕೆ ಬಂದಿದ್ದು, ಉನ್ನತ ಸಾಮಾಜಿಕ ಫಲಿತಾಂಶಗಳಾಗಿವೆ. ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮದಿಂದಾಗಿ ಶಿಕ್ಷಕರಲ್ಲಿ ಆದ ಧನಾತ್ಮಕ ಬದಲಾವಣೆಗಳ ಬಗ್ಗೆ ಅವರದೇ ಆದ ಪದಗಳಲ್ಲಿ ವಿವರಿಸಲು ಅವರನ್ನು ಕೇಳಲಾಯಿತು.

**ಶೇ. 94ರಷ್ಟು ಶಿಕ್ಷಕರು ತಮ್ಮ ಜೀವನದ ಗುಣಮಟ್ಟ ಸುಧಾರಿಸಿತೆನ್ನುವ ಮೊದಲ ಮೂರು ಫಲಿತಾಂಶಗಳು:**

ಪ್ರಶ್ನೆ: ನಿಮ್ಮ ಜೀವನದ ಗುಣಮಟ್ಟ ಹೇಗೆ ಸುಧಾರಿಸಿದೆ ಎಂಬುದನ್ನು ದಯವಿಟ್ಟು ವಿವರಿಸಿ. (ಸಂಖ್ಯೆ=189). ಮುಕ್ತ ಪ್ರಶ್ನೆ, 60ಡೆಸಿಬಲ್ಸ್ ನಿಂದ ಸಂಕೇತಗೊಂಡಿದೆ.



**ಶೇ. 33**
ಬೋಧನೆಯಲ್ಲಿ ಸುಧಾರಣೆಯ ಅನುಭವ ಪಡೆದವರು

*“ನಾನು ಶಿಕ್ಷಕನಾಗಲು ಬಯಸಿರಲಿಲ್ಲ. ನನಗೆ ಬೇರೆ ಆಯ್ಕೆ ಉಳಿದಿರಲಿಲ್ಲ ಮತ್ತು ಈ ವೃತ್ತಿಯನ್ನು ತೆಗೆದುಕೊಳ್ಳಲೇ ಬೇಕಾಯಿತು. ಆದರೆ, ಕಾರ್ಯಕ್ರಮದ ನಂತರ, ನಾನು ಉತ್ತಮ ಶಿಕ್ಷಕ ಆಗಬೇಕೆಂದು ಉತ್ಸಾಹ ಮತ್ತು ಪ್ರೇರಣೆಯನ್ನು ಪಡೆದುಕೊಂಡಿದ್ದೇನೆ”*



**ಶೇ. 21**
ಅನುಭೂತಿಯಲ್ಲಿ ಏರಿಕೆಯ ಅನುಭವ ಪಡೆದವರು

*“ಮೊದಲಿಗೆ, ನನಗೆ ಬಹಳ ಭಯ ಮತ್ತು ನಾಚಿಕೆಯಿತ್ತು. ನಾನು ಮುಂಗೋಪಿಯಾಗಿದ್ದರಿಂದ ಮಕ್ಕಳು ನನ್ನೊಡನೆ ಬೆರೆಯುತ್ತಿರಲಿಲ್ಲ ಮತ್ತು ಅವರು ನನಗೆ ಹೆದರುತ್ತಿದ್ದರು. ಆದರೆ ಈಗ ನಾನು ಅವರೊಡನೆ ಸ್ನೇಹಮಯಿಯಾಗಿದ್ದೇನೆ.”*



**ಶೇ. 21**
ಆತ್ಮವಿಶ್ವಾಸದಲ್ಲಿ ಏರಿಕೆಯನ್ನು ಅನುಭವಿಸಿದವರು

*“ನನಗೆ ವೇದಿಕೆಯ ಭಯವಿತ್ತು ಮತ್ತು ಇತರರೊಡನೆ ಮಾತನಾಡಲು ಭಯಪಡುತ್ತಿದ್ದೆ. ಹೆಣ್ಣು ಮಕ್ಕಳೊಡನೆ ಮಾತನಾಡಲೂ ಸಹ ನಾನು ನಾಚಿಕೆಪಡುತ್ತಿದ್ದೆ ಮತ್ತು ಮುಜುಗರಕ್ಕೊಳಗಾಗಿ ಹೆದರುತ್ತಿದ್ದೆ. ಈ ಕಾರ್ಯಕ್ರಮ ಅದರಿಂದ ಹೊರಬರಲು ನನಗೆ ಸಹಾಯ ಮಾಡಿದೆ.”*




## ಪರ್ಯಾಯಗಳು ಲಭ್ಯವಿದೆಯೇ?

91% ಶಿಕ್ಷಕರು ಉತ್ತಮ ಪರ್ಯಾಯವನ್ನು ಹುಡುಕುವುದು ಸುಲಭವಲ್ಲ ಎನ್ನುತ್ತಾರೆ; ಅವುಗಳಲ್ಲಿ ಪರ್ಯಾಯವನ್ನು ಹುಡುಕಿದವರು, ಪರ್ಯಾಯಕ್ಕಿಂತ ಟಿಡಿಪಿ ಉತ್ತಮ ಎನ್ನುತ್ತಾರೆ.

ಪರ್ಯಾಯಗಳ ಲಭ್ಯತೆಯು, ಟಿಡಿಪಿ ವಿರಳ ಉತ್ಪನ್ನವನ್ನು  ಒದಗಿಸುವ ಸ್ಪರ್ಧಾತ್ಮಕ ಪರಿಸರ ಮತ್ತು ಹಂತಗಳೊಳಗೆ  ಒಳದೃಷ್ಟಿಯನ್ನು ಒದಗಿಸುತ್ತದೆ. ಉತ್ತಮ ಪರ್ಯಾಯವನ್ನು ಸುಲಭವಾಗಿ  ಹುಡುಕಲಾಗದು ಎಂದು ಹೇಳಿದ ಶೇ. 91 ಶಿಕ್ಷಕರು, ಟಿಡಿಪಿಯನ್ನು ಒಂದು ವಿರಳ ಸಂಪನ್ಮೂಲ ಎಂದು ಸೂಚಿಸುತ್ತಾರೆ.


### ಪರ್ಯಾಯಗಳಿಗೆ ಪ್ರವೇಶಾವಕಾಶ (ಲಭ್ಯತೆ)


ಪ್ರಶ್ನೆ: ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮಕ್ಕೆ ಉತ್ತಮ ಪರ್ಯಾಯವನ್ನು ನೀವು ಹುಡುಕಲು ಸಾಧ್ಯವೇ? (n = 200)





### ಪರ್ಯಾಯಗಳ ಹೋಲಿಕೆ

ಪ್ರಶ್ನೆ: ಈ ಪರ್ಯಾಯವನ್ನು ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹೇಗೆ ಹೋಲಿಸುವಿರಿ? ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮವು? (n = 18)





# ಜೀವನ ಕೌಶಲ್ಯಗಳನ್ನು ಉತ್ತೇಜಿಸುವ ಶಿಕ್ಷಕರ ನಿರೂಪಣೆ





# ಆತ್ಮ ವಿಶ್ವಾಸವನ್ನು ಹೆಚ್ಚಿಸಲು ಶಿಕ್ಷಣೇತರ ಸಾಮರ್ಥ್ಯಗಳನ್ನು ಪೋಷಿಸುವುದು


*ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 6 ವರ್ಷಗಳ ಅನುಭವದೊಂದಿಗೆ 8-10 ತರಗತಿಗಳಿಗೆ ಬೋಧಿಸುತ್ತಿರುವ ಸಮಾಜ ವಿಜ್ಞಾನ ಶಿಕ್ಷಕ*



ನನ್ನ ತರಗತಿಯ ಹುಡುಗನೊಬ್ಬ ಪಠ್ಯಗಳಲ್ಲಿ ಉತ್ತಮನಾಗಿರಲಿಲ್ಲ. ನನ್ನ ಬಳಿಗೆ ಬಂದು ಶಾಲಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಬಗ್ಗೆ ಮಾತನಾಡಿದರು. ನಾನು ಅವನ ಆಸಕ್ತಿಯನ್ನು ತಡೆಯಲಿಲ್ಲ. ತರಗತಿಯ ಇತರ ವಿದ್ಯಾರ್ಥಿಗಳು ಅವರ ಆಸಕ್ತಿಯನ್ನು ಪ್ರೋತ್ಸಾಹಿಸುತ್ತಿರಲಿಲ್ಲ, ಮತ್ತು ನನ್ನ ಸಹೋದ್ಯೋಗಿಗಳು ಸಹ ಹುಡುಗನು ಶಿಕ್ಷಣದತ್ತ ಗಮನ ಹರಿಸಬೇಕಿದೆ ಎಂದು ಹೇಳುತ್ತಿದ್ದರು. ಕ್ರೀಡಾಕೂಟದಲ್ಲಿ ಭಾಗವಹಿಸಲು ನಾನು ಅವನಿಗೆ ಅನುಮತಿ ನೀಡಬಾರದು ಎಂದು ಹೇಳಲಾಯಿತು. ಯಾಕೆಂದರೆ ಅದು ಅವನ ಗಮನವನ್ನು ಬೇರೆಡೆಗೆ ಸೆಳೆಯುತ್ತದೆ. ಟಿಡಿಪಿ ಕಾರ್ಯಗಾರದ ಮೊದಲು, ಬಹುಶ: ನಾನು ಅದೇ ರೀತಿ ವರ್ತಿಸಿದ್ದೆ. ಆದರೆ ಈಗ ನಾನು ಈ ಹುಡುಗನನ್ನು ವಿಭಿನ್ನ ರೀತಿಯಾಗಿ ನೋಡಿದೆ. ನನ್ನ ಮಟ್ಟಿಗೆ, ಇದು ಯುವಕನ ಆತ್ಮ ವಿಶ್ವಾಸವನ್ನು ಬೆಳೆಸುತ್ತದೆ ಮತ್ತು ಕ್ರೀಡೆಗಳು ಅವನ ಮಾರ್ಗವನ್ನು ಗಟ್ಟಿಗೊಳಿಸುತ್ತವೆ ಎಂದು ಅರ್ಥಮಾಡಿಕೊಳ್ಳುವುದು. ಅವನು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದನು ಮತ್ತು ಗೆದ್ದನು! ಮಗುವಿನ ದೃಷ್ಟಿಕೋನದಿಂದ ಯಶಸ್ಸನ್ನು ನೋಡುವುದರ ಅರ್ಥವೇನೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಮಕ್ಕಳೊಂದಿಗೆ ಹೆಚ್ಚು ನಿಖಟವಾಗಿ ಸಂವಹನ ನಡೆಸಲು ಪ್ರಾರಂಭಿಸಿದೆ. ಮತ್ತು ಕೇವಲ “ಏನು” ಮಾತ್ರವಲ್ಲ “ಏಕೆ” ಎಂಬ ವಿಷಯಗಳನ್ನು ನೋಡುತ್ತಿದ್ದೇನೆ.

ಕಾರ್ಯಗಾರದ ಸಮಯದಲ್ಲಿ ನಾನು ರಚಿಸಿದ ನನ್ನ ಕನಸಿನ ತರಗತಿಯ ನನ್ನ ದೃಷ್ಟಿಕೋನ ನನ್ನೊಂದಿಗೆ ಉಳಿದಿದೆ. ಅದು ಸಾಧ್ಯ ಎಂದು ತಿಳಿದು ನಾನು ನನ್ನ ದೃಷ್ಟಿಕೋನದೊಂದಿಗೆ ಪಯಣಿಸುತ್ತಿದ್ದೇನೆ. ಇಂದು ನನ್ನ ಸ್ವಂತ ಬೋಧನಾ ವಿಧಾನದಲ್ಲಿ ಭಾರಿ ಬದಲಾವಣೆಯಾಗಿದೆ. ನಾನು ಸಂಗೀತ ಮತ್ತು ನಾಟಕದ ಮೂಲಕ ವಿನೋದವನ್ನು ಸಂಯೋಜಿಸಲು ಪ್ರಯತ್ನಿಸುತ್ತೇನೆ-ಇದು ಡ್ರೀಮ್ ಎ ಡ್ರೀಮ್ ಕಾರ್ಯಗಾರದಲ್ಲಿ ನಾನು ಗಳಿಸಿದ ಮತ್ತೊಂದು ಒಳನೋಟ. ಕಾರ್ಯಗಾರದ ನಂತರವೇ ನನ್ನ ಹಿಂದಿನ ತರಗತಿಗಳು ಎಷ್ಟು ನೀರಸವೆಂದು ನಾನು ಅರಿತುಕೊಂಡೆ.





# ದೃಷ್ಟಿಕೋನಗಳನ್ನು ಬದಲಾಯಿಸುವುದು ಸಾಧ್ಯ

*ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 2 ವರ್ಷಗಳ ಅನುಭವದೊಂದಿಗೆ 1-5 ತರಗತಿಗಳಿಗೆ ಬೋಧಿಸುತ್ತಿರುವ ವಿಜ್ಞಾನ ಶಿಕ್ಷಕ*



ತರಗತಿಯಲ್ಲಿ ದೈನಂದಿನ ದಿನಾಚರಿಯ ಒಂದು ಭಾಗವೆಂದರೆ ಮನೆ ಪಾಠವನ್ನು ನಿಯೋಜಿಸುವುದು ಮತ್ತು ಪರಿಶೀಲಿಸುವುದು. ಮನೆ ಪಾಠವನ್ನು ಪೂರ್ಣಗೊಳಿಸದ ಮಕ್ಕಳನ್ನು ನಾನು ಕೋಪಗೊಂಡು ಶಿಕ್ಷಿಸುತ್ತಿದ್ದೆ. ತರಗತಿಯ ಒಳಗೆ ಮತ್ತು ಹೊರಗೆ ಶಿಕ್ಷಕನಾಗಿ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುವುದು ನನಗೆ ಕಠಿಣವಾಗಿತ್ತು. ನಾನು ಬೋಧನಾ ವೃತ್ತಿಯನ್ನು ಬೇಸರದಿಂದ ಕಂಡುಕೊಂಡಿದ್ದೆ. ಜೀವನ ಕೌಶಲ್ಯ ಅನುಕೂಲಕ್ಕಾಗಿ ಡ್ರೀಮ್ ಎ ಡ್ರೀಮ್ ಕಾರ್ಯಗಾರವು ನನ್ನ ವೃತ್ತಿಪರ ಮತ್ತು ವೈಯಕ್ತಿಕ ಜೀವನದಲ್ಲಿ ಒಂದು ಮಹತ್ವದ ತಿರುವು. ನಾನು ಕ್ರಮೇಣ ಮಕ್ಕಳಲ್ಲಿನ ಭಾವನಾತ್ಮಕ ಪ್ರಯಾಣ ಮತ್ತು ನೈಸರ್ಗಿಕ ಸಾಮರ್ಥ್ಯಗಳನ್ನು ಗುರುತಿಸಲು ಮತ್ತು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದೆ ಮತ್ತು ಬೋಧನಾ ವೃತ್ತಿಯ ನೈತಿಕತೆಯನ್ನು ತಿಳಿದುಕೊಂಡೆ. ನಾನು ಹೊಸ ದೃಷ್ಟಿಕೋನದಲ್ಲಿ ಮಕ್ಕಳನ್ನು ನೋಡಲು ಸಾಧ್ಯವಾಯಿತು.

“ಮೇಡಂ, ವರುಣ್ ಒಂದು ವಾರದಿಂದ ಶಾಲೆಗೆ ಗೈರುಹಾಜರಾಗಿದ್ದಾನೆ. ನೀವು ಅವನನ್ನು ಶಿಕ್ಷಿಸುವಿರಿ ಎಂದು ಅವನು ತುಂಬಾ ಹೆದರುತ್ತಾನೆ” ಎಂದು ವರುಣ್ ಅವರ ತಾಯಿ ಹೇಳಿದರು. ಇದು ಮಿಂಚಿನಂತೆ ನನಗೆ ಹೊಡೆದಿದೆ! ಈ ಗ್ರಹಿಕೆಗೆ ನಾನು ಕಾರಣ ಎಂದು ತಿಳಿದಿದ್ದರಿಂದ ನಾನು ನನ್ನ ಮೇಲೆ ದುಃಖ ಮತ್ತು ಕೋಪಗೊಂಡಿದ್ದೆ. ನಾನು ವರುಣ್ ಅವನ ಕಳವಳಗಳನ್ನು ಆಲಿಸಲು ಉಪಕ್ರಮಗಳನ್ನು ತೆಗೆದುಕೊಂಡೆ ಮತ್ತು ಗೈರು ಹಾಜರಾದುದಕ್ಕೆ ನಾನು ಅವನನ್ನು ಶಿಕ್ಷಿಸುವುದಿಲ್ಲ ಎಂದು ಅವನಿಗೆ ನಯವಾಗಿ ತಿಳಿಸಿದೆ. ತರಗತಿಯಲ್ಲಿ ತಪ್ಪಿಹೋದ ಪಾಠವನ್ನು ಪೂರ್ಣಗೊಳಿಸಲು ಅವನಿಗೆ ಹೆಚ್ಚುವರಿ ಸಮಯವನ್ನು ನೀಡಿದ್ದೇನೆ. ನಿಧಾನವಾಗಿ ವಿದ್ಯಾರ್ಥಿಗಳು ನನ್ನೊಡನೆ ಹೆಚ್ಚು ಬೆರೆಯುತ್ತಿದ್ದಾರೆ ಮತ್ತು ಇತರರೊಂದಿಗೆ ನನ್ನ ಸಂಪರ್ಕವು ಸುಧಾರಿಸಿದೆ. ನಾನು ಅದನ್ನು ಎಲ್ಲೆಡೆ ಗಮನಿಸಿದ್ದೇನೆ, ಅದು ತರಗತಿಯ ಮಕ್ಕಳಾಗಿರಲಿ ಮತ್ತು ಮನೆಯಲ್ಲಿ ನನ್ನ ಕುಟುಂಬವಾಗಿರಲಿ.



# ಬಂಡಾಯದ ವರ್ತನೆಗಳಿಂದಾಚೆ ನೋಡುವುದು


*12 ವರ್ಷಗಳ ಅನುಭವದೊಂದಿಗೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 8-10 ತರಗತಿಗಳಿಗೆ ಬೋಧಿಸುತ್ತಿರುವ ಹಿಂದಿ ಶಿಕ್ಷಕಿ*

ತರಗತಿಯ ನಿರ್ವಹಣೆಯ ವಿಧಾನಗಳು ಸಮಯದೊಂದಿಗೆ ಬದಲಾಗಬೇಕು. ಏಕೆಂದರೆ ಇಂದು 10ನೇ ತರಗತಿಯ ಮಕ್ಕಳ ಜ್ಞಾನ ಮತ್ತು ನಡವಳಿಕೆಯು ಐದು ವರ್ಷಗಳ ಹಿಂದೆ ಇದ್ದದ್ದಕ್ಕಿಂತ ಭಿನ್ನವಾಗಿದೆ. ಅವರ ಭಾವನೆಗಳನ್ನು ಗುರುತಿಸುವುದು ಮತ್ತು ಅವರೊಂದಿಗೆ ಸಂಪರ್ಕ ಸಾಧಿಸುವುದು ನನಗೆ ಕಷ್ಟಕರವಾಗಿತ್ತು.

ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದ ಸಮಯದಲ್ಲಿ, ನಾನು ತರಗತಿಗೆ ಯಾವುದೇ ಭಾವನೆಯನ್ನು ತೆಗೆದುಕೊಂಡು ಹೋದರೂ ಅದು ವಿದ್ಯಾರ್ಥಿಗಳ ಮೇಲೆ ಬಲವಾಗಿ ಪ್ರಭಾವ ಬೀರುತ್ತದೆ ಎಂದು ನಾನು ಕಲಿತ್ತಿದ್ದೇನೆ. ನಾನು ಸದ್ದಿಲ್ಲದೆ ನನ್ನ ಮಾತುಗಳನ್ನು ಮಕ್ಕಳು ಕೇಳಬೇಕೆಂದು ಮತ್ತು ಅವರಿಗೆ ಅರಿವು ಮೂಡಿಸಲು ಗಂಭೀರವಾದ ಮತ್ತು ಕಠಿಣ ಮನಸ್ಥಿತಿಯೊಂದಿಗೆ ತರಗತಿ ಪ್ರವೇಶಿಸುತ್ತಿದ್ದೆ ಎಂದು ನಾನು ಅರಿತುಕೊಂಡೆ, ನನ್ನ ವಿದ್ಯಾರ್ಥಿಗಳಲ್ಲಿ ನಾನು ತಾರತಮ್ಯಗಳನ್ನು ತೋರಿಸಿದ್ದೇನೆ, ಹೆಚ್ಚಿನ ಸಾಧಕರಿಗೆ ಆಧ್ಯತೆಯ ಚಿಕಿತ್ಸೆಯನ್ನು ನೀಡಿದ್ದೇನೆ. ಆದರೆ ಈಗ ನಾನು ಅವರ ನಡವಳಿಕೆಯನ್ನು ಮೀರಿ ನೋಡುವ ಮೂಲಕ ಎಲ್ಲಾ ವಿದ್ಯಾರ್ಥಿಗಳ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ.


ಗಣೇಶ್ 10ನೇ ತರಗತಿಯ ವಿದ್ಯಾರ್ಥಿ, ಶಾಲೆಯಿಂದ ದೀರ್ಘಕಾಲ ಗೈರುಹಾಜರಾಗಿದ್ದ ಮತ್ತು ಬೀದಿಗಳಲ್ಲಿ ಓಡಾಡುವುದರ ಮೂಲಕ ಸಮಯ ಕಳೆಯುತ್ತಿದ್ದ. ಒಂದು ದಿನ ಶಾಲಾ ಸಮಯದಲ್ಲಿ ಅಂಗಡಿಯ ಮಾಲೀಕನಿಂದ ನನಗೆ ಕರೆ ಬಂದಿದ್ದು, ಗಣೇಶ್ ತನ್ನ ಅಂಗಡಿಯ ಮುಂದೆ ಇದ್ದಾನೆ ಎಂದು ತಿಳಿಸಿದರು ನಾನು ಬೇಗನೆ ನನ್ನ ಸಹೋದ್ಯೋಗಿಯ ಸಹಾಯವನ್ನು ತೆಗೆದುಕೊಂಡು ಅವನನ್ನು ಶಾಲೆಗೆ ಕರೆತಂದೆ. ಮತ್ತು ಅವನು ಶಾಲೆಗೆ ಗೈರುಹಾಜರಾಗಿದ್ದ ಕಾರಣವನ್ನು ಕೇಳಿದೆ. ನಿರೀಕ್ಷೆಯಂತೆ ಅವನು ತನ್ನ ಉತ್ತರಗಳಲ್ಲಿ ಅಸಭ್ಯವಾಗಿ ವರ್ತಿಸುತ್ತಿದ್ದ. ನಾನು ನನ್ನ ಕೋಪವನ್ನು ನಿಯಂತ್ರಿಸಿದೆ ಮತ್ತು ನಂತರ ಅವನು ಏನು ಮಾಡುತ್ತಿದ್ದಾನೆ ಎಂದು ಹಂಚಿಕೊಳ್ಳಲು ತಾಳ್ಮೆಯಿಂದ ಕೇಳಿಕೊಂಡೆ. ಅವನು ಕುಸಿದು ಕೂತ ಮತ್ತು ಹೇಳತೊಡಗಿದ. ಮರುದಿನ ನಾನು ಗಣೇಶನ ಹೊಸ ಅವತಾರವನ್ನು ನೋಡಿದೆ. ಅವನು ಈಗ ನಿಯಮಿತವಾಗಿ ಶಾಲೆಗೆ ಹೋಗುತ್ತಿದ್ದಾನೆ ಎಂದು ಹಂಚಿಕೊಳ್ಳಲು ನನಗೆ ಸಂತೋಷವಾಗಿದೆ.





# ಮನೆಯಲ್ಲಿ ಮತ್ತು ತರಗತಿಯಲ್ಲಿ ಅನುಭೂತಿ ಪ್ರತಿಧ್ವನಿಸುತ್ತದೆ

*ಸರಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು 1-5 ತರಗತಿಗಳಿಗೆ 15 ವರ್ಷಗಳ ಅನುಭವದೊಂದಿಗೆ ಎಲ್ಲಾ ವಿಷಯಗಳನ್ನು ಬೋಧಿಸುತ್ತಿದ್ದಾರೆ.*





ಶಿಕ್ಷಕಿಯಾಗಿ ನನ್ನ ಗಮನವು ಪಠ್ಯಕ್ರಮವನ್ನು ಸಮಯಕ್ಕೆ ಪೂರ್ಣಗೊಳಿಸುವುದು ಮತ್ತು ಉತ್ತಮ ಫಲಿತಾಂಶಗಳನ್ನು ಖಚಿತಪಡಿಸುವುದು. ನಾನು ಯಾವಾಗಲೂ ವಿಮರ್ಶಾತ್ಮಕಳಾಗಿದ್ದೆ ಮತ್ತು ವಿದ್ಯಾರ್ಥಿಗಳ ಅಂಕಗಳು ಅವರ ನಿಜವಾದ ಕಲಿಕೆಯ ಮೇಲಿರುವ ನೆರಳು ಎಂದುಕೊಂಡಿದ್ದೆ. ನನ್ನ ವಿದ್ಯಾರ್ಥಿಗಳಿಗೆ ಅವರ ಅನಿಸಿಕೆಗಳನ್ನು ಮತ್ತು ಅವರ ಭಾವನೆಗಳನ್ನು ಹಂಚಿಕೊಳ್ಳಲು ನಾನು ಅನುವು ಮಾಡಿಕೊಟ್ಟಿರಲಿಲ್ಲ. "ಸಕರಾತ್ಮಕವಾಗಿರುವುದು" ಮತ್ತು "ಅನುಭೂತಿ ಹೊಂದಿರುವುದು" ಇವು ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ನಾನು ಭಾಗವಹಿಸಿದ ನಂತರ ನನ್ನೊಂದಿಗೆ ಉಳಿದುಕೊಂಡಿರುವ ಎರಡು ಪರಿಕಲ್ಪನೆಗಳು ಮತ್ತು ನನ್ನೊಳಗೆ ನಾನು ಕಂಡುಕೊಂಡ ಆಳವಾದ ಕೂಗು ಏನೆಂದರೆ "ನಾನು ಬದಲಾಗಬೇಕಾಗಿದೆ".

ಮನೆಯಲ್ಲಿ ನಾನು ಪ್ರಜ್ಞಾಪೂರ್ವಕವಾಗಿ ನನ್ನ ಮಕ್ಕಳೊಂದಿಗೆ ಕಳೆಯಲು ಸಮಯವನ್ನು ಮೀಸಲಿಡುತ್ತೇನೆ ಮತ್ತು ಅವರು ಏನು ಭಾವಿಸುತ್ತಾರೆ ಎಂಬುದನ್ನು ನನ್ನೊಂದಿಗೆ ವ್ಯಕ್ತಪಡಿಸುತ್ತಾರೆ. ಅವರು ತಮ್ಮ ಆಸೆಗಳನ್ನು ಮತ್ತು ತಮ್ಮ ಭವಿಷ್ಯದಲ್ಲಿ ಅವರು ಏನು ಮಾಡಬೇಕೆಂಬುದರ ಬಗ್ಗೆ ಮುಕ್ತವಾಗಿ ನನ್ನೊಂದಿಗೆ ಹಂಚಿಕೊಳ್ಳಲು ಪ್ರಾರಂಭಿಸಿದ್ದಾರೆ. ಈ ಹಿಂದೆ ನಾನು ಅದನ್ನು ಕೇಳಲು ಅಥವಾ ಯೋಚಿಸಲು ಸಹ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ನನ್ನ ಮಕ್ಕಳ ಮತ್ತು ನನ್ನ ನಡುವೆ ನಾನು ದೊಡ್ಡ ಅಂತರವನ್ನು ಸೃಷ್ಟಿಸಿದ್ದೇನೆ ಎಂಬ ಅರಿವು ಕೂಡ ನನಗಿರಲಿಲ್ಲ. ಈಗ ನನ್ನ ಮಗ "ಅಮ್ಮ, ನೀವು ಬದಲಾಗಿದ್ದೀರಿ, ನೀವು ಈಗ ನಮ್ಮ ಮಾತನ್ನು ಕೇಳುತ್ತೀರಿ" ಎಂದು ಹೇಳಿದಾಗ ಮನಸ್ಸಿಗೆ ಸಂತೋಷವಾಗುತ್ತದೆ.

ಶಾಲೆಯಲ್ಲಿ, ನನ್ನ ವಿದ್ಯಾರ್ಥಿಗಳಲ್ಲಿ ಒಬ್ಬ ವಿಶೇಷ ಅಗತ್ಯವಿರುವ ಮಗು. ಅವನ ಆತ್ಮ ವಿಶ್ವಾಸವನ್ನು ಹೆಚ್ಚಿಸಲು ಅವನ ದರ್ಜೆಯ ಕಲಿಕೆಯ ಮಟ್ಟವನ್ನು ತಲುಪಲು ಸಹಾಯ ಮಾಡುವ ನನ್ನ ಪ್ರಯತ್ನಗಳು ಶಿಕ್ಷಕಿಯಾಗಿ ನನಗೆ ಆತ್ಮ ವಿಶ್ವಾಸವನ್ನುಂಟುಮಾಡಿದೆ. ನಾನು ಅವನ ಹೆತ್ತವರನ್ನು ಭೇಟಿಯಾಗಿದ್ದೇನೆ ಮತ್ತು ಅವನಿಗೆ ಉತ್ತಮ ಸಾಧನೆ ಮಾಡಲು ಅವರ ಬೆಂಬಲವನ್ನು ಕೇಳಿದ್ದೇನೆ. ನನ್ನ ಸುತ್ತಮುತ್ತಲಿನವರಿಗೆ ಸಕಾರಾತ್ಮಕ ಮತ್ತು ಅನುಭೂತಿ ಹೊಂದುವ ಮೂಲಕ, ವಿದ್ಯಾರ್ಥಿಗಳಿಗೂ ಮತ್ತು ಅವರ ಪೋಷಕರಿಗೂ ಇಬ್ಬರಿಗೂ ತಾವಾಗಿಯೇ ಇರಲು ಮತ್ತು ಮುಕ್ತವಾಗಿ ಹಂಚಿಕೊಳ್ಳಲು ನಾನು ಸುರಕ್ಷಿತ ವಾತಾವರಣವನ್ನು ರಚಿಸಿದ್ದೇನೆ ಎಂದು ನಾನು ಭಾವಿಸುತ್ತೇನೆ.



# ಒಳಗಿರುವ ಸುಗಮಗಾರಿಕೆಯನ್ನು ಹೊರಹಾಕುವ ಮೂಲಕ ಒತ್ತಡವನ್ನು ಕಡಿಮೆ ಮಾಡುವುದು

*23 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಗಳಲ್ಲಿ 5-7 ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ಬೋಧಿಸುತ್ತಿರುವ ಶಿಕ್ಷಕರು*

ವಿಜ್ಞಾನ ಪದವೀಧರಳಾಗಿ ನಾನು ವಿಜ್ಞಾನ ಮತ್ತು ಗಣಿತವನ್ನು ಕಲಿಸಲು ಇಷ್ಟಪಡುತ್ತೇನೆ ಮತ್ತು ಮಕ್ಕಳೊಂದಿಗೆ ಕೆಲಸಮಾಡುವುದನ್ನು ಒಳಗೊಂಡಿರುವ ನನ್ನ ವೃತ್ತಿಯನ್ನು ಪ್ರೀತಿಸುತ್ತೇನೆ. ನಾನು ಮಕ್ಕಳನ್ನು ಪ್ರೀತಿಸುತ್ತಿದ್ದರೂ ನಾನು ಅವರನ್ನು ಬೈಯುತ್ತಿದ್ದೆ. ಕೆಲವೊಮ್ಮೆ ನಾನು ಅವರೊಂದಿಗೆ ಬೇಸರಗೊಂಡಿದ್ದೆ! ಡ್ರೀಮ್ ಎ ಡ್ರೀಮ್ ನಡಿಸಿದ ಕಾರ್ಯಗಾರವು ಮಗುವಿನ ಮನಸ್ಸನ್ನು ಆಳವಾದ ಮಟ್ಟದಲ್ಲಿ ಅರ್ಥಮಾಡಿಕೊಳ್ಳಲು ನನಗೆ ಸಹಾಯಮಾಡಿತು. ಅಂದಿನಿಂದ ನಾನು ಕೇಳುವ ಮತ್ತು ಸಮ್ಮತಿಗೊಳಿಸುವ ನನ್ನ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಕೆಲಸ ಮಾಡಿದ್ದೇನೆ. ಮಕ್ಕಳು ಇದನ್ನು ಸ್ಪಷ್ಟವಾಗಿ ಹೇಳದಿರಬಹುದು. ಆದರೆ ಚಟುವಟಿಕೆಗಳು ಮತ್ತು ಮೋಜಿನ ಅಂಶಗಳಿದ್ದಾಗ ಅವರು ಕಲಿಕೆಯನ್ನು ಆನಂದಿಸುತ್ತಾರೆ.

ಈಗ ನಾನು ಹೆಚ್ಚು ಸೃಜನಾತ್ಮಕತೆಯಿಂದ ಪಾಠವನ್ನು ನೀಡುತ್ತೇನೆ. ನಾನು ಪ್ರತೀ ಪಾಠಕ್ಕೂ ಚಟುವಟಿಕೆಗಳನ್ನು ವಿನ್ಯಾಸಗೊಳಿಸುತ್ತೇನೆ ಮತ್ತು ಶಾಲೆಗೆ ಹೋಗುತ್ತೇನೆ. ನಾನು ಕೆಲವೊಮ್ಮೆ ತರಗತಿಗಳಲ್ಲಿ ಪಾತ್ರಗಳನ್ನು ಬದಲಾಯಿಸುತ್ತೇನೆ. ಉದಾಹರಣೆಗೆ: 5ನೇ ತರಗತಿಗೆ ನಾನು ಮೌಲ್ಯ ಶಿಕ್ಷಣದ ಕುರಿತು ಅಧಿವೇಶನಗಳನ್ನು ನಡೆಸುತ್ತೇನೆ. ನಾನು ತರಗತಿಯಲ್ಲಿ ಪಾಠಗಳನ್ನು ಮುನ್ನಡೆಸಲು ಮಕ್ಕಳಿಗೆ ಅವಕಾಶ ನೀಡುತ್ತೇನೆ ಮತ್ತು ಆಗ ನಾನು ವಿದ್ಯಾರ್ಥಿಯಾಗುತ್ತೇನೆ. ಮಕ್ಕಳೂ ಈ ಬದಲಾವಣೆಯನ್ನು ಇಷ್ಟಪಟ್ಟರು! ಮಕ್ಕಳು ಹೆಚ್ಚು ಆಸಕ್ತಿದಾಯಕವಾದ ಹೊಸಪಾಠಗಳನ್ನು ಸಿದ್ಧಪಡಿಸುವುದನ್ನು ನಾನು ನೋಡಬಲ್ಲೆ ಮತ್ತು ತರಗತಿಗಳನ್ನು ನಿಭಾಯಿಸುವಾಗ ಅವರ ಮುಖದ ಮೇಲಿನ ಹೆಮ್ಮೆಯನ್ನು ಗಮನಿಸುವುದರಲ್ಲಿ ಸಂತೋಷವಾಯಿತು. ಮಕ್ಕಳ ಆತ್ಮವಿಶ್ವಾಸ ಮಟ್ಟ ಹೆಚ್ಚಾಗಿದೆ ಎಂದು ನಾನು ಗಮನಿಸಿದೆ.

ಇತ್ತೀಚಿನ ದಿನಗಳಲ್ಲಿ ನನ್ನ ಜೀವನ ಕಥೆಗಳೊಂದಿಗೆ ನಾನು ಅವರಿಗೆ ಸ್ಫೂರ್ತಿ ನೀಡುತ್ತೇನೆ. ನಾನು ಅವರೊಂದಿಗೆ ಸುಲಭವಾಗಿ ಬೆರೆಯಬಹುದು ಮತ್ತು ನನ್ನೊಂದಿಗೆ ಹೆಚ್ಚು ಮುಕ್ತ ಮತ್ತು ಆರಾಮದಾಯಕವಾಗಿ ಇರಬಹುದು ಎಂಬುದಾಗಿ ಅವರು ಭಾವಿಸುತ್ತಾರೆ. ಕೆಲವೊಮ್ಮೆ ನಾನು ಇತರ ಪಠ್ಯ ವಿಷಯಗಳ ಶಿಕ್ಷಕರು ಕೊಡುವ ಮನೆಪಾಠ ಕೆಲಸಗಳು ಮಕ್ಕಳಿಗೆ ಒತ್ತಡವನ್ನು ಉಂಟುಮಾಡುತ್ತವೆಯೇ ಎಂದು ಖಚಿತಪಡಿಸಿಕೊಳ್ಳುತ್ತೇನೆ. ನಾನು ಇತರ ವಿಷಯ ಶಿಕ್ಷಕರನ್ನು ಭೇಟಿಯಾಗುತ್ತೇನೆ ಮತ್ತು ಪ್ರತಿ ವಿಷಯಕ್ಕೂ ಒಂದು ನಿರ್ಧಿಷ್ಟ ದಿವಸವನ್ನು ನಿಗದಿಪಡಿಸಿ ಚರ್ಚಿಸುತ್ತೇನೆ.





# ನವೀಕರಿಸಲ್ಪಟ್ಟ ಉದ್ದೇಶಗಳೊಂದಿಗೆ ಬೋಧನೆ


*7 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 8-10 ತರಗತಿಗಳಿಗೆ ಗಣಿತ ಬೋಧಿಸುತ್ತಿರುವ ಶಿಕ್ಷಕ*

ನಾನು ಬಿ.ಎಡ್ ಪೂರ್ಣಗೊಳಿಸಿದ ನಂತರ ನಾನು ಶಿಕ್ಷಕನಾಗಿ ಕೆಲಸ ಮಾಡಲು ಪ್ರಾರಂಭಿಸಿದೆ ಮತ್ತು ನನ್ನ ಗಮನವು ಕೇವಲ ಶಿಕ್ಷಕನಾಗಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೊಂದಿಗೆ ವಿದ್ಯಾರ್ಥಿಗಳನ್ನು ಹೇಗೆ ಉತ್ತೀರ್ಣಗೊಳಿಸುವುದು ಮತ್ತು ಸಮಯಕ್ಕೆ ನನಗೆ ನೀಡಲಾದ ಪಠ್ಯ ಕ್ರಮವನ್ನು ನಾನು ಹೇಗೆ ಪೂರ್ಣಗೊಳಿಸಬಹುದು ಎಂಬುದರ ಮೇಲೆಯೇ ಕೇಂದ್ರೀಕೃತವಾಗಿತ್ತು. ಡ್ರೀಮ್ ಎ ಡ್ರೀಮ್ ಆಯೋಜಿಸಿದ ಕಾರ್ಯಗಾರಗಳಲ್ಲಿ ಭಾಗವಹಿಸಿದ ನಂತರ ನನ್ನ ದೃಷ್ಟಿಕೋನವು ಬದಲಾಯಿತು. ನಾನು ನನ್ನನ್ನು ಕೇಳಿಕೊಂಡಂತೆ "ಶಿಕ್ಷಕನಾಗಿ ನನ್ನ ಉದ್ದೇಶವೇನು? ಪಠ್ಯ ಕ್ರಮವನ್ನು ಪೂರ್ಣಗೊಳಿಸುವುದಾ? ಅಥವಾ ಅದಕ್ಕಿಂತ ಹೆಚ್ಚೇನಾದರೂ ಇರುವುದಾ ಎಂದು?" ಇಂಥಹ ಪ್ರಶ್ನೆ ನನ್ನಲ್ಲಿ ದೊಡ್ಡ ಬದಲಾವಣೆಯನ್ನು ತಂದಿತು. ಆ ನಂತರ ನಾನು ನನ್ನ ತರಗತಿಯ ಮಕ್ಕಳಲ್ಲಿ ಕುತೂಹಲವನ್ನು ಬೆಳೆಸಲಾರಂಭಿಸಿದೆ.

ಈಗ ಪಾಠದ ಕೊನೆಯಲ್ಲಿ ನಾನು, ಮಕ್ಕಳು ಪಾಠದ ಬಗ್ಗೆ ಯಾವುದಾದರೂ ಪ್ರಶ್ನೆಗಳನ್ನು ಹೊಂದಿದ್ದಾರೆಯೇ ಎಂದು ಸಾಮಾನ್ಯವಾಗಿ ಕೇಳುತ್ತೇನೆ, ಇದನ್ನು ಹಿಂದೆಂದೂ ಮಾಡಿರಲಿಲ್ಲ. ಇದರಿಂದ ಅವರು ನನಗೆ ಪ್ರಶ್ನೆಯನ್ನು ಕೇಳಲು ಒಂದು ವಾತಾವರಣವನ್ನು ಸೃಷ್ಟಿಸಲಾಗಿದೆ. ಅಲ್ಲದೆ ಈಗ ನಾನು ಹೆಚ್ಚಿನ ಹುರುಪನ್ನು ತರುತ್ತೇನೆ ಮತ್ತು ನಾನು ಅದನ್ನು ಮಾಡಿದಾಗ ಮಕ್ಕಳು ಹೆಚ್ಚು ಸಾಮರ್ಥ್ಯಥಯುತವಾಗಿ ಇರುವುದನ್ನು ಕಂಡುಕೊಂಡಿದ್ದೇನೆ.


ಆಳವಾದ ಮಟ್ಟದಲ್ಲಿ ನನ್ನನ್ನು ಅರ್ಥಮಾಡಿಕೊಳ್ಳುವ ಪ್ರಾಮುಖ್ಯತೆಯನ್ನು ನಾನು ಅರಿತುಕೊಂಡೆ. ಮೊದಲ ಬಾರಿಗೆ ನನ್ನ ಸಾಮರ್ಥ್ಯವನ್ನು ಗುರುತಿಸುವ ಪ್ರಯಾಣವನ್ನು ನಾನು ಪ್ರಾರಂಭಿಸಿದೆ. ನನ್ನ ಕೀಳರಿಮೆ ಸಂಕೀರ್ಣತೆಯು ನನ್ನ ಗೆಳೆಯರೊಂದಿಗೆ ನನ್ನ ಅಭಿಪ್ರಾಯವನ್ನು ಮುಕ್ತವಾಗಿ ಹಂಚಿಕೊಳ್ಳುವುದನ್ನು ತಡೆಯುತ್ತದೆ ಎಂದು ನಾನು ಗುರುತಿಸಿದೆ. ಇತರರು ನನ್ನ ಬಗ್ಗೆ ಏನು ಯೋಚಿಸುತ್ತಾರೆ ಎಂಬ ಬಗ್ಗೆ ನಾನು ನಿರಂತರ ಚಿಂತೆ ಮಾಡುತ್ತಿದ್ದೆ. ನಮಗೆ ಅನುಕೂಲಗೊಳಿಸುತ್ತಿರುವವರ ನಂಬಿಕೆಯಂತೆ ನಾನು ಹಂಚಿಕೊಳ್ಳುವ ಯಾವುದಾದರೂ ನನ್ನ ಕಲಿಕೆಯಲ್ಲಿ ಒಂದು ಹೆಜ್ಜೆ ಮುಂದಿದ್ದೇನೆ ಮತ್ತು ನನ್ನ ಸ್ವಂತ ಕಲಿಕೆ ನನ್ನೊಂದಿಗಿದೆ ಎಂಬ ನಂಬಿಕೆ ಉಳಿದಿದೆ. ಈಗ ನಾನು ಇತರ ಶಿಕ್ಷಕರೊಂದಿಗೆ ಮಾತಾಡುತ್ತೇನೆ ಮತ್ತು ನನ್ನ ಅಭಿಪ್ರಾಯಗಳನ್ನು ವಿಶ್ವಾಸದಿಂದ ಹಂಚಿಕೊಳ್ಳುತ್ತೇನೆ. ಕಾರ್ಯಗಳು ಉದ್ದೇಶದ ಪ್ರಜ್ಞೆಯನ್ನು ಮರಳಿ ತಂದವು- ನಾನು ಶಿಕ್ಷಕ ಮತ್ತು ಅದರ ಬಗ್ಗೆ ನನಗೆ ಹೆಮ್ಮೆ ಇದೆ.





# ತರಗತಿಗಳಿಗಿಂದಾಚೆ ಮಕ್ಕಳೊಂದಿಗೆ ಸಂಪರ್ಕ ಸಾಧಿಸುವುದು

*15 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 10ನೇ ತರಗತಿಗೆ ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕಿ*







ನಾನು ವಿದ್ಯಾರ್ಥಿಗಳಿಂದ ದೂರವನ್ನು ಕಾಪಾಡಿಕೊಳ್ಳುವುದಾಗಿ ನಂಬಿದ್ದೆ. ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ಭಾಗವಹಿಸಿದ ನಂತರ ನನ್ನ ಮುಖದ ಮೇಲೆ ಗಂಭೀರ ನೋಟವನ್ನು ಹೊಂದಬಾರದು ಮತ್ತು ತರಗತಿಯ ಆಚೆಗೆ ಮಕ್ಕಳನ್ನು ಸಂಪರ್ಕಿಸಬಾರದು ಎಂದು ನಾನು ಭಾವಿಸಿದ್ದೆ. ಆಶ್ಚರ್ಯ ಎಂಬಂತೆ ನಾನು ಮತ್ತು ಮಕ್ಕಳು ಹತ್ತಿರವಾಗಲು ಸ್ವಲ್ಪ ಸಮಯ ಹಿಡಿಯಿತು. ಮುಂಚೆ ಮಕ್ಕಳು ನನ್ನೊಂದಿಗೆ ಮಾತನಾಡಲು ಹಿಂಜರಿಯುತ್ತಿದ್ದರು.

ಕಾರ್ಯಗಾರದ ನಂತರ, ಕನೆಕ್ಟ್-ಡಿಸ್ಕನೆಕ್ಟ್-ಕನೆಕ್ಟ್ ಎಂಬ ಪ್ರತ್ಯಾದಾನದ ಪ್ರಕ್ರಿಯೆಯನ್ನು ನೀಡುವ ವಿಭಿನ್ನ ವಿಧಾನದ ಬಗ್ಗೆ ನಾನು ಕಲಿತಿದ್ದೇನೆ. ಇದರಲ್ಲಿ ನಾನು ಅಧಿಕೃತ ಸಕಾರಾತ್ಮಕ ವಾಖ್ಯೆಗಳ ನಡುವೆ ವಿಮರ್ಶಾತ್ಮಕ ಪ್ರಕ್ರಿಯೆಯನ್ನು ಮಿಶ್ರಣ ಬೆರಕೆ (ಸ್ಯಾಂಡ್ ವಿಚ್) ರೀತಿಯಲ್ಲಿ ಮಾಡುತ್ತೇನೆ.

ಸ್ಲೇಟ್ ತಿನ್ನುವ ಅಭ್ಯಾಸವನ್ನು ಹೊಂದಿದ್ದ ಸ್ವಾತಿಯೊಂದಿಗೆ ನಾನು ಹೊಸ ವಿಧಾನವನ್ನು ಪ್ರಯತ್ನಿಸಿದೆ. ನಾನು ಅವಳೊಂದಿಗೆ ಊಟದ ವಿರಾಮದ ಸಮಯದಲ್ಲಿ ಮತ್ತು ತರಗತಿಯ ಸಮಯದ ನಂತರ ಅವಳ ಕುಟುಂಬ ಮತ್ತು ಅವಳ ಹಿನ್ನಲೆ ಬಗ್ಗೆ ತಿಳಿದುಕೊಳ್ಳಲು ಕುಳಿತೆ. ಈ ವಿಧಾನವು ಅವಳಿಗೆ ಸ್ಲೇಟ್ ತಿನ್ನುವುದನ್ನು ನಿಲ್ಲಿಸುವುದಕ್ಕೆ ಸಹಾಯವಾಯಿತು. ನಾನು ಅವಳನ್ನು ಮನವೊಲಿಸಲು ಪ್ರಯತ್ನಿಸಿದೆ. ಅವಳ ಆತ್ಮವಿಶ್ವಾಸ, ಅವಳ ಸಾಮರ್ಥ್ಯವನ್ನು ನಾನು ಮೆಚ್ಚಿದೆ. ಪ್ರತಿದಿನ ನಮ್ಮ ಬಂಧವು ಬಲಗೊಳ್ಳುವುದನ್ನು ನಾನು ನೋಡುತ್ತಿದ್ದೇನೆ. ಅವಳು ಸ್ಲೇಟ್ ತಿನ್ನಬೇಕೆಂದು ಭಾವಿಸಿದಾಗಲೆಲ್ಲಾ ಅವಳು ಬೆಲ್ಲವನ್ನು ತಿನ್ನಬೇಕೆಂದು ನಾನು ಸೂಚಿಸಿದೆ. ಒಂದು ದಿನ ಸ್ವಾತಿ ತಾನು ಸ್ಲೇಟ್ ತಿನ್ನುವುದನ್ನು ನಿಲ್ಲಿಸಿದ್ದಾಗಿ ಸಂತೋಷದಿಂದ ಹಂಚಿಕೊಂಡಳು.

ನಾನು ಮೊದಲು ಯಾವಾಗಲೂ ವಿದ್ಯಾರ್ಥಿಗಳಲ್ಲಿ "ಸಂಪರ್ಕ ಕಡಿತಗೊಳಿಸುವುದರ" ಮೇಲೆ ಕೇಂದ್ರೀಕೃತನಾಗಿದ್ದೆ. ಆದರೆ ಈಗ ನಾನು ಎಲ್ಲಾ ತರಗತಿಗಳಲ್ಲಿ ಹೊಸ ವಿಧಾನವನ್ನು ಅಳವಡಿಸಿಕೊಳ್ಳುತ್ತಿದ್ದೇನೆ ಮತ್ತು ಮಕ್ಕಳನ್ನು ಸುಲಭವಾಗಿ ಪ್ರಶಂಸಿಸುತ್ತೇನೆ ಮತ್ತು ಅವರಲ್ಲಿನ ಸಕರಾತ್ಮಕ ಅಂಶಗಳನ್ನು ನಾನು ನೋಡಲು ಸಾಧ್ಯವಾಗುತ್ತಿದೆ. ಈ ಎಲ್ಲಾ ವರ್ಷಗಳ ನಂತರ, ನಾನು ಶಿಕ್ಷಕರ ಪ್ರಾಮುಖ್ಯತೆಯನ್ನು ಮತ್ತು ಶಿಕ್ಷಕರಾಗಿ ಅವರು ವಿದ್ಯಾರ್ಥಿಗಳನ್ನು ಬೆಂಬಲಿಸುವ ಸುಗಮಗಾರರಾಗಬೇಕಿರುವ ಪಾತ್ರವನ್ನು ಅರಿತುಕೊಂಡಿದ್ದೇನೆ.





## ಹೋಲಿಕೆಗಳನ್ನು ದೂರ ಮಾಡುವ ಮೂಲಕ ಪ್ರೇರಣೆ ಮತ್ತು ಕಾರ್ಯಕ್ಷಮತೆಯನ್ನು ಉತ್ತೇಜಿಸುವುದು.


*10 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 1-3 ತರಗತಿಗಳಿಗೆ ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕಿ*



ನನ್ನ ಮಗ ಯಾವಾಗಲೂ ಶೈಕ್ಷಣಿಕ ಕಲಿಕೆಯಲ್ಲಿ ಸರಾಸರಿಗಿಂತ ಕಡಿಮೆ. ನಮ್ಮನ್ನು ಪೋಷಕರ-ಶಿಕ್ಷಕರ ಸಭೆಗೆ ಕರೆದಾಗಲೆಲ್ಲಾ ನನ್ನ ಗಂಡ ಮತ್ತು ನಾನು ಹಾಜರಾಗುವುದಿಲ್ಲ. ಯಾಕೆಂದರೆ ಅವರು ನಮ್ಮ ಮಗುವಿನ ನ್ಯೂನ್ಯತೆಗಳ ಬಗ್ಗೆ ಮಾತ್ರ ಮಾತನಾಡುತ್ತಾರೆ.

ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ನಾನು ಭಾಗವಹಿಸಿದಾಗ ಮಗುವಿನ ಮನಸ್ಸನ್ನು ಅರ್ಥಮಾಡಿಕೊಳ್ಳಲು ನನಗೆ ಅವಕಾಶ ಸಿಕ್ಕಿತು ಮತ್ತು ಸರಿಯಾದ ಸಮಯದಲ್ಲಿ ಕಾಳಜಿ ವಹಿಸದಿದ್ದರೆ ಮಗು ಅನುಭವಿಸುವ ಭಾವಾನಾತ್ಮಕ ಪ್ರಕ್ಷುಬ್ಧತೆಯನ್ನು ಅರ್ಥಮಾಡಿಕೊಳ್ಳಲು ಅವಕಾಶವಾಯಿತು. ನನ್ನ ಮಗ ಹೇಗೆ ಬೆಳೆಯುತ್ತಿದ್ದಾನೆಂದು ನಾನು ಆಶ್ಚರ್ಯಪಡುತ್ತೇನೆ. ಅವನ ಹೋರಾಟಗಳು ಶಾಲೆ ಮತ್ತು ಮನೆಯಲ್ಲಿನ ಒತ್ತಡಗಳನ್ನು ನಿಭಾಯಿಸಲು ಪ್ರಯತ್ನಿಸುತ್ತಿರಬೇಕು. ನನ್ನ ಮಗನನ್ನು ಎಲ್ಲಾ ಸಮಯದಲ್ಲೂ ನನ್ನ ತರಗತಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಇತರ ವಿದ್ಯಾರ್ಥಿಗಳೊಂದಿಗೆ ಹೋಲಿಸಿ, ನಾನು ಉದ್ದೇಶಪೂರ್ವಕವಾಗಿ ಅವನನ್ನು ತುಂಬಾ ಚಿಕ್ಕವನನ್ನಾಗಿ ಮಾಡುತ್ತಿದ್ದೆ. ಇದನ್ನು ಯೋಚಿಸಿ ಒಂದು ವಿಷಾದದ ನೋವು ನನ್ನ ಮೂಲಕ ಹಾದುಹೋಯಿತು. ನಾನು ಅವನ ಮಾತನ್ನು ಕೇಳಲು ಪ್ರಾರಂಭಿಸಿದೆ. ಅದನ್ನು ನಾನು ಮೊದಲು ಮಾಡಿರಲಿಲ್ಲ. ಈಗ ಅವನು ಏನು ಸಾಧಿಸುತ್ತಿದ್ದಾನೆ ಎಂಬುದರ ಬಗ್ಗೆ ಗಮನಕೊಡುತ್ತಾ ಮತ್ತು ಅವನಿಗೆ ಜವಾಬ್ದಾರಿಗಳನ್ನು ನೀಡುತ್ತಾ ನಾನು ಅವನನ್ನು ನಂಬಿದ್ದೇನೆ ಎಂದು ತೋರಿಸಿದೆ. ನಾನು ಅವನ ಪಕ್ಕದಲ್ಲೇ ನಿಂತು ನನಗೆ ಸಿಕ್ಕ ಪ್ರತಿಯೊಂದು ಅವಕಾಶವನ್ನು ಪ್ರೇರೇಪಿಸಿದೆ. ಕಾಲಾನಂತರದಲ್ಲಿ ನಾನು ಅವನಲ್ಲಿ ಬದಲಾವಣೆಯನ್ನು ನೋಡಲಾರಂಭಿಸಿದೆ. ಅವನು ತನ್ನ ಶಾಲಾ ಪರೀಕ್ಷೆಗಳಲ್ಲಿ 95% ಅಂಕಗಳನ್ನು ಗಳಿಸಿದ್ದಾನೆ! ಅವನ ಶಿಕ್ಷಕರು ಸಹ ಆಘಾತಕ್ಕೊಳಗಾದರು. ಏಕೆಂದರೆ ನನ್ನಂತೆಯೇ ಅವರು ಅವನನ್ನು ಕಡಿಮೆ ಸಾಧಕರಲ್ಲಿ ಒಬ್ಬರು ಎಂದು ನಂಬಿದ್ದರು.

ಕಡಿಮೆ ಸಾಧನೆ ಮಾಡುತ್ತಿರುವ ನನ್ನ ವಿದ್ಯಾರ್ಥಿಗಳ ಪೋಷಕರು, ನಾವು ಅವರ ಮಕ್ಕಳ ಬಗ್ಗೆ ಹಿನ್ನಡೆಯ ಬೆಳಕಿನಲ್ಲಿ ಮಾತಾಡುವಾಗ ಹೇಗೆ ಭಾವಿಸಿರಬೇಕು ಎಂಬುದರ ಕುರಿತು ಯೋಚಿಸುವಂತೆ ಮಾಡಿದೆ. ಮಗುವಿಗೆ ಮುಂದುವರಿಯಲು ಏನು ಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು ಮತ್ತು ಅಗತ್ಯವಾದ ಬೆಂಬಲವನ್ನು ಕೊಡುವುದು ಶಿಕ್ಷಕರ ನಿಜವಾದ ಪಾತ್ರ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ.



## ವರ್ತನೆಗಳಲ್ಲಿ ಅಡಗಿರುವ ಅಗತ್ಯವನ್ನು ಗುರುತಿಸುವುದು

*8 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 1-5 ತರಗತಿಗಳಿಗೆ ಸಮಾಜ ವಿಜ್ಞಾನ ಮತ್ತು ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕರು*





ಹರ್ಷವರ್ಧನ್ ಕ್ರೀಯಾಶೀಲತೆಯಿಂದ ಕೂಡಿದ ಮತ್ತು ಸಹಾಯ ಮಾಡುವ ಗುಣವುಳ್ಳ ಹುಡುಗನಾಗಿದ್ದು ಅಧ್ಯಯನದಲ್ಲಿ ಆಸಕ್ತಿಯನ್ನು ಹೊಂದಿಲ್ಲ. ಅವನ ಪೋಷಕರು ಮತ್ತು ಅವನ ಶಿಕ್ಷಕರು ಅವನನ್ನು ಸಾಕಷ್ಟು ಬೆಂಬಲಿಸಿದರು. ಆದರೆ ಅವನಿಗೆ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗಲಿಲ್ಲ. ಶಿಕ್ಷಕರು ಮತ್ತು ಪೋಷಕರ ಕಾಳಜಿ ಅವನಿಗೆ ದೊಡ್ಡ ಹೊರೆಯಂತೆ ಕಾಣುತ್ತದೆ. ಅವನ ಸಮಸ್ಯೆಯನ್ನು ಯಾರಿಗೂ ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಅವನಿಗೆ ಬೇಸರವಾಯಿತು ಮತ್ತು ಒಮ್ಮೆ ತರಗತಿಯ ಪರೀಕ್ಷೆಯ ಸಮಯದಲ್ಲಿ ಉದ್ದೇಶಪೂರ್ವಕವಾಗಿಯೇ ಅವನ ಕೈಯನ್ನು ಕತ್ತರಿಸಿಕೊಂಡ. ಇದು ನನಗೆ ಗಾಬರಿ ತರಿಸಿತು. ನಾನು ಅವನ ಹೆತ್ತವರಿಗೆ ಸಲಹೆ ನೀಡುತ್ತಿರುವಾಗ ತಿಳಿದ ವಿಚಾರವೆನೆಂದರೆ ಅವನು ಚೆನ್ನಾಗಿ ಅಧ್ಯಯನ ಮಾಡದ ಕಾರಣ ಅವನನ್ನು ಮನೆಯಲ್ಲಿ ಹೊಡೆದಿದ್ದಾರೆ ಮತ್ತು ಅವನು ಮನೆ ಬಿಡಲು ಸಿದ್ದನಾಗಿದ್ದಾನೆ ಎಂದು ತಿಳಿದುಬಂದಿದೆ.

ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ಕೇಳುವ ಮತ್ತು ಅದನ್ನು ಊರ್ಜಿತಗೊಳಿಸುವ ಕೌಶಲ್ಯದ ಬಗ್ಗೆ ನಾನು ಕಲಿತಿದ್ದೇನೆ. ಹರ್ಷವರ್ಧನ್ ಮತ್ತು ಅವರ ಹೆತ್ತವರೊಂದಿಗೆ ಅನುಭೂತಿ ಹೊಂದಲು ಇದು ನನಗೆ ಸಹಾಯಮಾಡಿತು. ನಾನು ಕೇಳಲು ಪ್ರಾರಂಭಿಸಿದೆ ಮತ್ತು ಅವನು ತನ್ನ ಸಮಸ್ಯೆಗಳನ್ನು ಬಹಿರಂಗವಾಗಿ ಹಂಚಿಕೊಳ್ಳಲು ಪ್ರಾರಂಭಿಸಿದ. ಅವನು ಹೇಳಿದ "ಮೇಡಂ, ನಾನು ನನ್ನೊಂದಿಗೆ ಬೇಸರಗೊಂಡಿದ್ದೇನೆ ಮತ್ತು ನನಗೆ ಯಾಕೆ ಓದಲು ಸಾಧ್ಯವಾಗುತ್ತಿಲ್ಲ ಎಂದು ನನಗೆ ತಿಳಿದಿಲ್ಲ ಎಂದು". ನಾನು ಅವನಿಗೆ ವರ್ಣಮಾಲೆಗಳನ್ನು ಕಲಿಸಲು ಪ್ರಾರಂಭಿಸಿದೆ. ಈಗ ಅವನ ನಡವಳಿಕೆಯಲ್ಲಿ ಶಿಕ್ಷಕರು ಮತ್ತು ಅವನ ಹೆತ್ತವರೊಂದಿಗೆ ಸಂವಹನದಲ್ಲಿ ಸಕಾರಾತ್ಮಕ ಸುಧಾರಣೆಯನ್ನು ಕಾಣಬಹುದು. ಈ ಬದಲಾವಣೆಗಳನ್ನು ನೋಡಿ ನನಗೆ ಆಶ್ಚರ್ಯ ಮತ್ತು ಸಂತೋಷವಾಯಿತು. ಅವನು ತನ್ನ ಅತ್ಯುತ್ತಮ ಪ್ರಯತ್ನ ಮಾಡುತ್ತಿದ್ದಾನೆ. ಮಕ್ಕಳಿಗೆ ಅಗತ್ಯವಿರುವ ಭಾವನಾತ್ಮಕ ಬೆಂಬಲ ಮತ್ತು ಮೌಲ್ಯಮಾಪನವನ್ನು ಗುರುತಿಸಿದಕ್ಕಾಗಿ ನನಗೆ ಸಂತೋಷ ಮತ್ತು ತೃಪ್ತಿ ಇದೆ.



# ‘ನಿಷೇಧಿತ’ ಸಂಭಾಷಣೆಗಳನ್ನು ಸಾಮಾನ್ಯೀಕರಿಸುವ ಮೂಲಕ ಅದರ ಬಗ್ಗೆ ಇರುವ ಅಡ್ಡಿಗಳನ್ನು ದೂರಮಾಡುವುದು

*12 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 8-10 ತರಗತಿಗಳಿಗೆ ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕ*

“ಹದಿಹರೆಯದವರ” ಬಗ್ಗೆ ಅಧಿವೇಶನಗಳನ್ನು ನಡೆಸಲು ನನಗೆ ಹೆಚ್ಚುವರಿ ಜವಾಬ್ದಾರಿ ನೀಡಲಾಯಿತು. ನನಗೆ ಇದು ಇಲ್ಲಿಯವರೆಗೆ ಮತ್ತೊಂದು ವಿಷಯವಾಗಿತ್ತು. ಹೇಗಾದರೂ ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ಭಾಗವಹಿಸಿದ ನಂತರ ನಾನು ವಿದ್ಯಾರ್ಥಿಗಳನ್ನು ತೀಕ್ಷ್ಣವಾದ ಮಸೂರದಿಂದ ನೋಡಿದೆ ಮತ್ತು ಅವರ ಭಾವನೆಗಳು, ಭಯಗಳು ಮತ್ತು ಗೊಂದಲಗಳನ್ನು ಸ್ಪಷ್ಟವಾಗಿ ಗಮನಿಸಿದೆ. 8ನೇ ತರಗತಿಯ ಕೆಲವು ಹುಡುಗರು ತಮ್ಮ ಸಹಪಾಠಿ ರೋಸಿಯ ಬಗ್ಗೆ ನನಗೆ ದೂರು ನೀಡಿದರು. ಯಾಕೆಂದರೆ ಅವಳು ಬಳಸಿದ ಭಾಷೆಯಿಂದ ಅವರು ತೊಂದರೆಗೀಡಾದರು. ಅವಳು ಒಳ್ಳೆಯ ವಿದ್ಯಾರ್ಥಿನಿ ಎಂದು ನನಗೆ ತಿಳಿದಿತ್ತು. ಮತ್ತು ಅವಳ ನಡವಳಿಕೆ ಮತ್ತು ಸಂಭಾಷಣೆಯನ್ನು ನಾನು ಗಮನಿಸಿದೆ. ಮುಂದಿನ ತರಗತಿಯಲ್ಲಿ ದೈಹಿಕ ಆಕರ್ಷಣೆಯ ಬಗ್ಗೆ ಮಾತನಾಡುವುದು ಮತ್ತು ಇತರ ಲೈಂಗಿಕತೆಯ ಬಗ್ಗೆ ತಿಳಿದುಕೊಳ್ಳುವುದು ಈ ವಯಸ್ಸಿನಲ್ಲಿ ಸರಿ ಎಂದು ನಾನು ಹೇಳಿದೆ. ನಾನು ಹದಿಹರೆಯದ ಸಮಯದಲ್ಲಿ ‘ಮೋಹ’ ಕುರಿತು ಮಾತನಾಡಿದೆ. ನನ್ನ ಹದಿಹರೆಯದ ಕಥೆ ಮತ್ತು ನಾನು ತಿಳಿಯದೆ ಮಾಡಿದ ತಪ್ಪುಗಳನ್ನು ಹಂಚಿಕೊಳ್ಳುವ ಮೂಲಕ ನಾನು ವಿಷಯವನ್ನು ಸಾಮಾನ್ಯಗೊಳಿಸಿದೆ. ನಂತರ ನಾನು ರೋಸಿಯೊಂದಿಗೆ ಅನುಭೂತಿ ಹೊಂದಿದೆ ಮತ್ತು ಅವಳನ್ನು ಮೌಲ್ಯೀಕರಿಸಿದೆ. ಅವಳು ತನ್ನ ಸ್ನೇಹಿತರೊಂದಿಗೆ ಅಶ್ಲೀಲ ವೀಡಿಯೋಗಳನ್ನು ನೋಡಿದ್ದಾಳೆಂದು ನಾನು ತಿಳಿದುಕೊಂಡೆ. ಅದು ಶಾಲೆಯಲ್ಲಿ ಅವಳ ನಡವಳಿಕೆಯನ್ನು ಪ್ರಭಾವಿಸಿತು. ಯಾವುದೇ ಮನುಷ್ಯನು ಜೀವನದ ಸೌಂದರ್ಯವನ್ನು ಆನಂದಿಸಲು ದೈಹಿಕವಾಗಿ, ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಸಂಪೂರ್ಣವಾಗಿ ಬೆಳೆಯಬೇಕೆಂದು ನಾನು ಅವಳಿಗೆ ಹೇಳಿದೆ. ಅವಳು ಅರ್ಥಮಾಡಿಕೊಂಡಳು ಮತ್ತು ತನ್ನ ಅಧ್ಯಯನದತ್ತ ಗಮನ ಹರಿಸುವುದಾಗಿ ಹೇಳಿದಳು.

ಶಿಕ್ಷಕನಾಗಿ ನಾನು ಸುಲಭವಾಗಿ ಕೋಪಗೊಳ್ಳುತ್ತಿದ್ದೆ. ಜನರಿಗೆ ಅವರ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ನಾನು ಎಂದಿಗೂ ಜಾಗವನ್ನು ನೀಡಿಲ್ಲ. ಮನೆಯಲ್ಲಿ ನನ್ನ ಕುಟುಂಬ ಸದಸ್ಯರೊಂದಿಗೆ ನಾನು ಸಾಕಷ್ಟು ಘರ್ಷಣೆಗಳನ್ನು ನಡೆಸಿದೆ. ಕಾರ್ಯಗಾರದ ನಂತರ ಭಾವನೆಗಳನ್ನು ಹೇಗೆ ನಿಭಾಯಿಸುವುದು ಎಂದು ನಾನು ಕಲಿತಿದ್ದೇನೆ.

“ರಿವರ್ ಆಫ್ ಲೈಫ್” ಚಟುವಟಿಕೆಯ ಸಂದರ್ಭದಲ್ಲಿ ನಾನು ಮಾತ್ರ ಸಮಸ್ಯೆಯನ್ನು ಹೊಂದಿಲ್ಲ ಎಂದು ಅರಿತುಕೊಂಡೆ. ಈಗ ನಾನು ನನ್ನ ಕುಟುಂಬದೊಂದಿಗೆ ಸಮಯ ಕಳೆಯುತ್ತೇನೆ. ನಾನು ತಾಳ್ಮೆ ಮತ್ತು ಅನುಭೂತಿಯನ್ನು ಕಲಿತಿದ್ದೇನೆ.









# ಸೃಜನಶೀಲತೆ ಮತ್ತು ವಿನೋದದ ಮೂಲಕ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು

*8 ವರ್ಷಗಳ ಅನುಭವದೊಂದಿಗೆ 6-10 ತರಗತಿಗಳಿಗೆ ಸಮಾಜ ವಿಜ್ಞಾನ ಬೋಧನೆ ಮಾಡುತ್ತಿರುವ ಎನ್ ಜಿ ಒ ಶಿಕ್ಷಕಿ*

ನನ್ನ ತರಗತಿಯ ವಿದ್ಯಾರ್ಥಿಗಳು ವಿಭಿನ್ನ ಹಿನ್ನಲೆಯಿಂದ ಬಂದವರು. ತರಗತಿಯಲ್ಲಿ ಯುವಕರನ್ನು ತೊಡಗಿಸಿಕೊಳ್ಳುವುದು ನನಗೆ ದೊಡ್ಡ ಸವಾಲಾಗಿದೆ. ಒಬ್ಬರು, ವಿದ್ಯಾರ್ಥಿಗಳನ್ನು ತರಗತಿಯಲ್ಲಿ ಹೇಗೆ ಬೇಸರ ಮತ್ತು ಆಸಕ್ತಿರಹಿತರಾಗದಂತೆ ಉಳಿಸಿಕೊಳ್ಳಬಹುದು? ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರವು ಮೋಜಿನ ಚಟುವಟಿಕೆಗಳ ಮೂಲಕ ತನ್ನ ತರಗತಿಗೆ ಹೊಸತನವನ್ನು ಮತ್ತು ಸೃಜನಶೀಲತೆಯನ್ನು ತರಲು ಸಹಾಯಮಾಡಿತು. ನಾನು ಸಂಯೋಜಿಸಿರುವ ಒಂದು ವಿಷಯವೆಂದರೆ ಮಕ್ಕಳು ಪ್ರೀತಿಸುವ ಮತ್ತು ಅದರ ಕಾರಣದಿಂದಾಗಿ ತರಗತಿಯಲ್ಲಿ ಹೆಚ್ಚು ತೊಡಗಿಸಿಕೊಳ್ಳುವ "ರಿದಮ್" ಚಟುವಟಿಕೆ. ತರಗತಿ ಪ್ರಾರಂಭವಾಗುವ ಮೊದಲು ವಿದ್ಯಾರ್ಥಿಗಳನ್ನು ಶಕ್ತಿಯುತಗೊಳಿಸಿವುದು ಮತ್ತು ಅವರನ್ನು ಜೊತೆಜೊತೆಗೆ ಒಟ್ಟುಗೊಳಿಸುವುದು ರಿದಮ್‌ನ ಉದ್ದೇಶ. ನಾನು ನಿಜವಾಗಿಯೂ ಆನಂದಿಸಿದ ಮತ್ತೊಂದು ಚಟುವಟಿಕೆ ಎಂದರೆ ಕಥೆ ಹೇಳುವುದು ಮತ್ತು ಚಿತ್ರಿಸುವುದು. ಇದರಲ್ಲಿ ಒಬ್ಬ ವ್ಯಕ್ತಿಯು ಕಥೆಯನ್ನು ನಿರೂಪಿಸುತ್ತಾನೆ ಮತ್ತು ಇನ್ನೊಬ್ಬ ವ್ಯಕ್ತಿಯು ಕಥೆಯ ಪ್ರಕಾರ ಚಿತ್ರವನ್ನು ಬಿಡಿಸುತ್ತಾನೆ. ಸಮಾಜ ವಿಜ್ಞಾನದ ಶಿಕ್ಷಕಿಯಾಗಿ ಇತಿಹಾಸದ ವಿಷಯವನ್ನು ನಡೆಸುವಾಗ ನಾನು ಇದನ್ನು ಪ್ರಯತ್ನಿಸಿದೆ. ನಾನು ಪಾಠವನ್ನು ಆರಿಸಿದೆ. ಅದನ್ನು ಜೋರಾಗಿ ಓದಿ ಮತ್ತು ನನ್ನ ಮಾತನ್ನು ಕೇಳಲು, ಅದನ್ನು ದೃಶ್ಯೀಕರಿಸಲು ಮತ್ತು ಅವರ ಮನಸ್ಸಿಗೆ ಬರುವ ಯಾವುದನ್ನಾದರೂ ಬರೆಯಲು ವಿದ್ಯಾರ್ಥಿಗಳನ್ನು ಕೇಳಿದೆ. ಇದು ಅನೇಕ ವಿದ್ಯಾರ್ಥಿಗಳಿಗೆ ದೀರ್ಘಕಾಲದವರೆಗೆ ಪಾಠವನ್ನು ನೆನಪಿಟ್ಟುಕೊಳ್ಳಲು ಸಹಾಯಮಾಡಿತು. ಅವರ ಅಭಿವ್ಯಕ್ತಿಗಳನ್ನು ನೋಡುವ ಮೂಲಕ ಅವರು ಸರಳವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ.

ಒಬ್ಬ ವ್ಯಕ್ತಿಯಾಗಿ ನಾನು ಯಾವಾಗಲೂ ಇತರರೊಂದಿಗೆ ಮಾತನಾಡಲು ಮತ್ತು ನನ್ನ ಕಥೆಯನ್ನು ಮುಕ್ತವಾಗಿ ಹಂಚಿಕೊಳ್ಳಲು ಸ್ವಲ್ಪ ಭಯಪಡುತ್ತೇನೆ. ನನ್ನಿಂದಲೇ ರಚಿಸಲಾದ ಸುರಕ್ಷಿತ ಸ್ಥಳವು ನನಗೆ ತುಂಬಾ ಆರಾಮದಾಯಕವಾಗಿದೆ. ಮತ್ತು ರಂಗಭೂಮಿ ಚಟುವಟಿಕೆಗಳು ನಾನು ವಯಸ್ಕಳೆಂಬುದನ್ನು ಮರೆಯುವಂತೆ ಮಾಡಿ ಮತ್ತೆ ನಾನು ಮಗುವಿನಂತೆ ಆಗುವ ಹಾಗೆ ಮಾಡಿದೆ. ಈಗ ನನ್ನ ಬಗ್ಗೆ ನನ್ನ ವಿಶ್ವಾಸವು ಬಹಳ ಹೆಚ್ಚಾಗಿದೆ.




# ಅನುಭೂತಿ ಮತ್ತು ವೈಯಕ್ತಿಕ ಗಮನ ನೀಡುವುದರ ಮೂಲಕ ಆಸಕ್ತಿಯನ್ನು ಹೆಚ್ಚಿಸುವುದು

*2 ವರ್ಷಗಳ ಅನುಭವದೊಂದಿಗೆ 6-8 ತರಗತಿಗಳಿಗೆ ಕಲಿಕಾ ಕೇಂದ್ರದಲ್ಲಿ ಸಮಾಜ ವಿಜ್ಞಾನ ಶಿಕ್ಷಕಿ*




ಕಲಿಕಾ ಕೇಂದ್ರದಲ್ಲಿ ಶಿಕ್ಷಕರಾಗಿ, ಶಾಲೆಯಲ್ಲಿ ಅವರು ಕಲಿತದ್ದನ್ನು ಪರಿಶೀಲಿಸಲು ಮತ್ತು ನಿಯೋಜಿಸಲಾದ ಮನೆ ಕೆಲಸಗಳನ್ನು ಪೂರ್ಣಗೊಳಿಸಲು ಮಕ್ಕಳಿಗೆ ಸಹಾಯ ಮಾಡುವುದು ನನ್ನ ಪಾತ್ರ. ಡ್ರೀಮ್ ಎ ಡ್ರೀಮ್ ಕಾರ್ಯಗಾರದಲ್ಲಿ ಭಾಗವಹಿಸಿದ ನಂತರ ನಾನು ತಾಳ್ಮೆಯನ್ನು ಹೊಂದಿಲ್ಲ ಎನ್ನುವುದು ನನಗೆ ಮನವರಿಕೆಯಾಯಿತು. ಮಕ್ಕಳನ್ನು ಕೇವಲ ತಮ್ಮ ಕಾರ್ಯವನ್ನು ಪೂರ್ಣಗೊಳಿಸಲು ಮಾತ್ರ ಬೆಂಬಲಿಸುತ್ತಿದ್ದೇನೆ. ಅಲ್ಲದೇ ಅವರನ್ನು ಅರ್ಥಮಾಡಿಕೊಳ್ಳಲು, ಅವರನ್ನು ಕೇಳಲು ಮತ್ತು ಯಾವುದೇ ಅನುಭೂತಿಯನ್ನು ತೋರಿಸಲು ಅದಕ್ಕಿಂತ ಮಿಗಿಲಾದ ಪ್ರಯತ್ನವನ್ನು ಮಾಡಿಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡೆ. ಪ್ರತಿ ಮಗುವೂ ವಿಶಿಷ್ಟವಾಗಿದೆ ಮತ್ತು ಅದಕ್ಕೆ ತಕ್ಕಂತೆ ಅವರ ಜೊತೆ ವರ್ತಿಸಬೇಕು ಎಂಬುದನ್ನು ನಾನು ಕಲಿತಿದ್ದೇನೆ.

ಮನೋಹರ್ ಎಂಬ ವಿದ್ಯಾರ್ಥಿಯು ಕಲಿಕಾ ಕೇಂದ್ರಕ್ಕೆ ತುಂಬಾ ಅನಿಯಮಿತನಾಗಿದ್ದ. ಅವನು ಹೊಸ ಶಾಲೆಗೆ ಸೇರಿದಾಗ ಅವನು ಅಧ್ಯಯನದಲ್ಲಿ ಆಸಕ್ತಿಯನ್ನು ಕಳೆದುಕೊಂಡಿದ್ದ ಎಂದು ನನಗೆ ತಿಳಿದಿತ್ತು. ಒಂದು ದಿನ ನಾನು ಅವನೊಂದಿಗೆ ಕುಳಿತು ಅವನ ಅನಿಯಮಿತವಾಗಿರುವುದರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಅವನಿಗೆ ಕುಟುಂಬ ಸಮಸ್ಯೆಗಳಿವೆ ಎಂದು ನನಗೆ ತಿಳಿಯಿತು. ಅವರ ತಾಯಿ ಕುಟುಂಬಕ್ಕಾಗಿ ಸಂಪಾದಿಸಲು ಹೆಣಗಾಡುತ್ತಿರುವಾಗ ಮಗನಾಗಿ ಅವನ ಜವಾಬ್ದಾರಿಯನ್ನು ಕೇಳುವ ಮೂಲಕ ಅವನನ್ನು ಪ್ರೇರೇಪಿಸಲು ಪ್ರಯತ್ನಿಸಿದೆ.

ನಾನು ಬೋರ್ಡಿನಲ್ಲಿ ಎಲ್ಲಾ ವರ್ಣಮಾಲೆಯನ್ನು ಬರೆದು ಅವನ ಹೆಸರಿನ 'ವರ್ಣಮಾಲೆಯನ್ನು' ಗುರುತಿಸಲು ಕಲಿಸಿದೆ. ಅವನು ನಿಧಾನವಾಗಿ ಗುರುತಿಸಲು ಪ್ರಾರಂಭಿಸಿದ ಮತ್ತು ಅದನ್ನು ಬರೆಯಲು ಪ್ರಯತ್ನಿಸಿದ. ಅವನು ತನ್ನ ಹೆಸರನ್ನು ಓದಲು ಮತ್ತು ಬರೆಯಲು ಸಾಧ್ಯವಾದಾಗ ನಾನು ಅವನ ದೃಷ್ಟಿಯಲ್ಲಿ ಸಂತೋಷವನ್ನು ನೋಡಿದೆ. ಅವನು ಬೋರ್ಡಿನಲ್ಲಿ ಪ್ರತಿದಿನ ತನ್ನ ಹೆಸರನ್ನು ಬರೆಯಲು ಇಷ್ಟಪಟ್ಟ. ಅವನು ತನ್ನ ತಾಯಿಯ ಹೆಸರನ್ನು ಬರೆಯಲು ಪ್ರಯತ್ನಿಸಿದ. ಅದು ಅವನ ಹೃದಯಕ್ಕೆ ತುಂಬಾ ಹತ್ತಿರದ ವಿಷಯವಾಗಿತ್ತು. ಈಗ ಅವನು ತರಗತಿಗಳಿಗೆ ಹೆಚ್ಚು ನಿಯಮಿತವಾಗಿ ಹಾಜರಾಗುತ್ತಿದ್ದಾನೆ. ನನಗಪ್ರಶ್ನೆಗಳನ್ನು ಕೇಳಲು ಪ್ರಯತ್ನಿಸುತ್ತಾನೆ. ನನ್ನ ದೊಡ್ಡ ಕಲಿಕೆಯೆಂದರೆ ನಾನು ಮಕ್ಕಳನ್ನು ನಿಯಂತ್ರಿಸಬಾರದು. ಆದರೆ ಅವರ ಭಾವನೆಗಳನ್ನು ಬೆಂಬಲಿಸುವ ಮೂಲಕ ಅವರನ್ನು ನಿರ್ವಹಿಸಬೇಕು ಎಂಬುದು.







# ಬೆತ್ತವಿಲ್ಲದೆ ತರಗತಿಯನ್ನು ನಿಭಾಯಿಸುವುದು

*7 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 3ನೇ ತರಗತಿಗೆ ಎಲ್ಲಾ ವಿಷಯಗಳನ್ನು ಕಲಿಸುವುದು*









ಮೂರನೇಯ ದರ್ಜೆಯ ವಿದ್ಯಾರ್ಥಿಗಳಿಗೆ ಬೋಧಿಸುವುದು ಕಷ್ಟದಾಯಕ ಮತ್ತು ನಾನು ಆಗಾಗ್ಗೆ ತರಗತಿಯಲ್ಲಿ ಬೆತ್ತವನ್ನು ಬಳಸುತ್ತಿದ್ದೆ. ಅದು ನನ್ನ ತರಗತಿಯನ್ನು ನಿಭಾಯಿಸುವ ಏಕೈಕ ಮಾರ್ಗವೆಂದು ನಾನು ಭಾವಿಸಿದ್ದೆ. ನಾನು ಯಾವತ್ತು ವಿದ್ಯಾರ್ಥಿಗಳಿಗೆ ಕಿವಿಗೊಡುತ್ತಿರಲಿಲ್ಲ ಅಥವಾ ಅವರೊಂದಿಗೆ ಸಂಪರ್ಕವನ್ನು ಹೊಂದಿರುತ್ತಿರಲಿಲ್ಲ.

ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರವೊಂದರಲ್ಲಿ ನಾನು 'ಆಲಿಸುವುದು' ಮತ್ತು 'ಆಲಿಸದೆ ಇರುವುದು' ಚಟುವಟಿಕೆಯಲ್ಲಿ ಭಾಗವಹಿಸಿದ್ದೆ. ಅಲ್ಲಿ ನಾನು ಯಾರೊಂದಿಗೋ ಜೋಡಿಯಾಗಿದ್ದೆ ಮತ್ತು ನಮ್ಮ ಮೇಲೆ ಆಳವಾಗಿ ಪ್ರಭಾವ ಬೀರಿದ ಘಟನೆಗಳನ್ನು ಹಂಚಿಕೊಳ್ಳಲು ನಮಗೆ ಸೂಚನೆ ನೀಡಲಾಯಿತು. ನನ್ನ ಜೊತೆಗಾರರಾಗಿದ್ದವರ ಮನವೊಲಿಸಲು ಎಷ್ಟು ಪ್ರಯತ್ನಿಸಿದರೂ ನನ್ನ ಜೊತೆಗಾರರು ನನ್ನ ಮಾತುಗಳನ್ನು ಆಲಿಸಲಿಲ್ಲ. ಅಂತಿಮವಾಗಿ ನಾನು ಅವರನ್ನು ಬಿಟ್ಟು ಸಂಪರ್ಕ ಕಡಿತಗೊಳಿಸಿ ಮೌನವಾಗಿ ಕುಳಿತೆ. ನಂತರ ನನಗೆ ಅರ್ಥವಾಯಿತು ಏನೆಂದರೆ ನನ್ನ ವಿದ್ಯಾರ್ಥಿಗಳು ನನ್ನೊಂದಿಗೆ ಮಾತನಾಡಲು ಪ್ರಯತ್ನಿಸಿದಾಗ ನಾನು ಕೇಳುತ್ತಿರಲಿಲ್ಲ. ಆಗ ಅವರು ಹೇಗೆ ಭಾವಿಸುತ್ತಿದ್ದರು ಎಂಬುದನ್ನು ಮನನ ಮಾಡತೊಡಗಿದೆ. ನಾನು ಅವರ ಮಾತುಗಳನ್ನು ಕೇಳಲು ನಿರಾಕರಿಸಿದ್ದಲ್ಲದೇ ಅವರೊಂದಿಗೆ ಕಠಿಣವಾಗಿ ಮಾತಾಡುತ್ತಿದ್ದೆ. ನಾನು ಅನುಭವಿಸಿದ ನೋವುಗಳನ್ನು ವಿದ್ಯಾರ್ಥಿಗಳ ನೋವಿನೊಂದಿಗೆ ಸಂಪರ್ಕಿಸಲು ಪ್ರಾರಂಭಿಸಿದೆ.

ನನ್ನ ನಡವಳಿಕೆಯನ್ನು ಬದಲಾಯಿಸಲು ನಿರ್ಧರಿಸಿದೆ. ನನ್ನ ವಿದ್ಯಾರ್ಥಿಗಳನ್ನು ಶಿಸ್ತಿನಲ್ಲಿಡಲು ನಾನು ಬೆತ್ತವನ್ನು ಬಳಸುವುದನ್ನು ನಿಲ್ಲಿಸಿದೆ. ನಾನು ಅವರಿಗೆ ಕಥೆಗಳನ್ನು ಹೇಳಲು ಪ್ರಾರಂಭಿಸಿದೆ. ವಿದ್ಯಾರ್ಥಿಗಳು ತಮ್ಮ ಕೆಲಸಗಳನ್ನು ಮುಗಿಸಲು ಅವರನ್ನು ಪ್ರಶಂಸಿಸಲು ಮತ್ತು ಪ್ರೇರೇಪಿಸಲು ಪ್ರಾರಂಭಿಸಿದೆ ಮಾತ್ರವಲ್ಲದೆ, ನಾನು ಅವರೊಂದಿಗೆ ಹೆಚ್ಚು ಸಂಪರ್ಕ ಸಾಧಿಸಲು ಪ್ರಾರಂಭ ಮಾಡಿದೆ. ಅವರ ಅಭಿಪ್ರಾಯಗಳನ್ನು ಮತ್ತು ಅವರ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ನಾನು ಅವರಿಗೆ ಒಂದು ವೇದಿಕೆಯನ್ನು ರಚಿಸಿದೆ. ನಾನು ಅವರನ್ನು ಶಿಕ್ಷಿಸುವುದಿಲ್ಲ ಎಂದು ನನ್ನ ವಿದ್ಯಾರ್ಥಿಗಳಿಗೆ ಈಗ ತಿಳಿದಿದೆ. ಇದು ಅವರನ್ನು ಇನ್ನಷ್ಟು ತುಂಟತನಕ್ಕೆ ಕಾರಣವಾಗಿಸಿದೆ! ನನ್ನ ತರಗತಿಗೆ ತಯಾರಿ ನಡೆಸಲು ಮತ್ತು ವಿದ್ಯಾರ್ಥಿಗಳೊಂದಿಗೆ ಸಕರಾತ್ಮಕ ರೀತಿಯಲ್ಲಿ ತೊಡಗಿಸಿಕೊಳ್ಳಲು ನಾನು ಈಗ ಶ್ರಮಿಸುತ್ತೇನೆ. ನನ್ನ ವಿದ್ಯಾರ್ಥಿಗಳಿಗೆ ಆದರ್ಶಪ್ರಾಯವಾಗಲು ನಾನು ಪ್ರಯತ್ನಿಸುತ್ತೇನೆ.



# ಶಿಕ್ಷಣ ಮತ್ತು ಶಿಕ್ಷಣೇತರ ಸವಾಲುಗಳನ್ನು ತಾಳ್ಮೆಯಿಂದ ಪರಿಹರಿಸುವುದು


*6 ವರ್ಷಗಳ ಅನುಭವ ಹೊಂದಿರುವ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ ಯುಕೆಜಿಯ ಶಿಕ್ಷಕಿ*





ಯುಕೆಜಿಯಲ್ಲಿರುವ ನನ್ನ ವಿದ್ಯಾರ್ಥಿಗಳು ತುಂಬಾ ಸಕ್ರೀಯರಾಗಿರುತ್ತಾರೆ. ಅವರೊಂದಿಗೆ ಮುಂದುವರಿಯಲು ನಾನು ಯಾವಾಗಲೂ ನನ್ನ ತುದಿಬೆರಳುಗಳಲ್ಲಿ ಇರಬೇಕಾಗುತ್ತದೆ. ವಿದ್ಯಾರ್ಥಿಗಳಲ್ಲಿ ಒಬ್ಬನಾದ ಕಿಶೋರ್ ಪ್ರತಿದಿನ ಪೆನ್ಸಿಲ್ ಮತ್ತು ರಬ್ಬರ್ ನಂತಹ ವಸ್ತುಗಳನ್ನು ಕದಿಯುತ್ತಿದ್ದ. ಇದರಿಂದ ನಾನು ಮತ್ತು ಇತರ ಶಿಕ್ಷಕರು ಬೇಸರಗೊಂಡಿದ್ದೆವು. ಒಮ್ಮೆ ಅವನು ನನ್ನ ಕೆಂಪು ಬಣ್ಣದ ಪೆನ್ನು ಕದ್ದು ಕೆಲವು ದಿನಗಳ ನಂತರ ಅದನ್ನು ಉಡುಗೊರೆಯಾಗಿ ನನಗೆ ಕೊಟ್ಟನು. ಅದು ನನ್ನ ಕಳೆದುಹೋದ ಪೆನ್ನು ಎಂದು ನಾನು ಗುರುತಿಸಿದೆ. ಆ ದಿನ ಅದನ್ನು ಕದ್ದಿದ್ದನ್ನು ಅವನು ಒಪ್ಪಲಿಲ್ಲ. ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ಆಲಿಸುವಿಕೆ ಮತ್ತು (ವ್ಯಾಲಿಡೇಶನ್) ಊರ್ಜಿತಗೊಳಿಸುವಿಕೆಯ ಬಗ್ಗೆ ನನ್ನ ಕಲಿಕೆಯನ್ನು ನಾನು ನೆನಪಿಸಿಕೊಂಡಿದ್ದೇನೆ. ಅವನು ಕದಿಯುವ ಕಾರ್ಯದಲ್ಲಿನ ಶಕ್ತಿ ಮತ್ತು ಕೌಶಲ್ಯವನ್ನು ನಾನು ಗುರುತಿಸಿದೆ ಮತ್ತು ಅದನ್ನು ಕಥೆಯೊಂದಿಗೆ ಸಾಮಾನ್ಯೀಕರಿಸಿದೆ. ನಂತರ ಅವನು ನನ್ನಿಂದ ಪೆನ್ನು ಕದ್ದಿದ್ದಾಗಿ ಬೇಗನೆ ಒಪ್ಪಿಕೊಂಡನು.

ಅವನೊಂದಿಗೆ ಸಮಯ ಕಳೆದ ನಂತರ, ಅವನ ಹೆತ್ತವರು ಅನಕ್ಷರಸ್ಥರಾಗಿದ್ದರಿಂದ ಮತ್ತು ಮನೆಯಲ್ಲಿ ಅವನ ಮನೆಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಮನೆಯಲ್ಲಿ ಅವನನ್ನು ಬೆಂಬಲಿಸಲು ಯಾರೂ ಇಲ್ಲ ಎಂದು ನನಗೆ ತಿಳಿಯಿತು. ಅವನ ಸಹಪಾಠಿಗಳೂ ಅವನನ್ನು ಒರಟು ಹುಡುಗ ಎಂದು ಕಳಂಕ ಹಚ್ಚಿದ್ದರು. ಪರಿಕಲ್ಪನೆಗಳನ್ನು ನಿಧಾನವಾಗಿ ಅರ್ಥಮಾಡಿಕೊಳ್ಳಲು ನಾನು ಅವನಿಗೆ ಸಹಾಯ ಮಾಡಿದೆ. ದಿನದಿಂದ ದಿನಕ್ಕೆ ನಮ್ಮ ಒಡನಾಟವು ಆಳವಾಗಿ ಬೆಳೆಯಿತು. ಒಂದು ದಿನ ಕಿಶೋರ್ ನನ್ನ ಬಳಿಗೆ ಬಂದು ಅವನ ಸಮವಸ್ತ್ರ ಹರಿದಿದ್ದರಿಂದ ಶಾಲಾ ಪ್ರವಾಸಕ್ಕೆ ಹೋಗಲು ಸಾಧ್ಯವಿಲ್ಲ ಎಂದು ತಿಳಿಸಿದನು. ಮಾತ್ರವಲ್ಲದೇ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಅವನ ತಾಯಿಗೆ ಹೊಸ ಸಮವಸ್ತ್ರವನ್ನು ಖರೀದಿಸಲು ಸಾಧ್ಯವಿಲ್ಲ. ಆಗ ನಾನು ಅವನ ಸ್ನೇಹಿತನಿಂದ ಹೆಚ್ಚುವರಿ ಸಮವಸ್ತ್ರವನ್ನು ಎರವಲು ಪಡೆದು ಕಿಶೋರ್‌ಗೆ ಕೊಡಿಸಬೇಕಾಯಿತು. ಕಿಶೋರ್ ಸಂತೋಷದಿಂದ ಶಾಲಾ ಪ್ರವಾಸಕ್ಕೆ ಅದನ್ನು ಧರಿಸಿದ್ದ.






# ಅಧಿಕೃತ ಹಂಚಿಕೆಯ ಮೂಲಕ ಗೌರವವನ್ನು ಪಡೆದುಕೊಳ್ಳುವುದು

*10 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 9-10 ತರಗತಿಗಳಿಗೆ ಬೋಧಿಸುತ್ತಿರುವ ಹಿಂದಿ ಶಿಕ್ಷಕ*

ನಮ್ಮ ಶಾಲೆ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಪೂರೈಸುವ ಇಂಗ್ಲೀಷ್ ಮಾಧ್ಯಮ ಶಾಲೆಯಾಗಿದೆ. ವಿಕ್ರಮ್ ಹೊಸದಾಗಿ ನಮ್ಮ ಶಾಲೆಗೆ ಸೇರಿಕೊಂಡವನು. ಅವನ ಆತ್ಮವಿಶ್ವಾಸ ಕಡಿಮೆಯಾಗಿತ್ತು. ಅವನು ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರಲಿಲ್ಲ ಮತ್ತು ಶಿಕ್ಷಣ ತಜ್ಞರಲ್ಲಿಯೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ನಾನು ವಿಕ್ರಮ್‌ನ ಹಿಂದಿನ ಶಾಲೆಯಿಂದ ಮಾಹಿತಿಯನ್ನು ಸಂಗ್ರಹಿಸಿದೆ ಮತ್ತು ಅವನು ಎಲ್ಲಾ ಸಹ-ಪಠ್ಯ ಕ್ರಮದ ಚಟುವಟಿಕೆಗಳಲ್ಲಿ ಭಾಗವಹಿಸಿದ ಅತ್ಯಂತ ಸಕ್ರಿಯ ಮಗು ಎಂದು ತಿಳಿದು ಆಶ್ಚರ್ಯಪಟ್ಟೆ. ಡ್ರೀಮ್ ಎ ಡ್ರೀಮ್ ಕಾರ್ಯಗಾರದಲ್ಲಿ ನಾನು ಭಾಗವಹಿಸಿದಾಗ ಮಗುವಿನೊಂದಿಗೆ ಸಂಪರ್ಕ ಸಾಧಿಸಲು ಬಳಸುವ ವಿವಿಧ ಹಂತದ (ವ್ಯಾಲಿಡೇಶನ್) ಊರ್ಜಿತಗೊಳಿಸುವಿಕೆಯ ಬಗ್ಗೆ ನಾನು ತಿಳಿದುಕೊಂಡೆ.

ವಿಕ್ರಮ್ ಅವನೊಂದಿಗೆ ಸಮಯ ಕಳೆದ ನಂತರ, ಅವನ ಆಶಯಕ್ಕೆ ವಿರುದ್ಧವಾಗಿ ಅವನ ಪೋಷಕರು ಅವನ ಶಾಲೆಯನ್ನು ಕನ್ನಡ ಮಾಧ್ಯಮದಿಂದ ಇಂಗ್ಲೀಷ್ ಮಾಧ್ಯಮಕ್ಕೆ ಬದಲಾಯಿಸಿದ್ದಾರೆ ಎಂದು ನನಗೆ ತಿಳಿದಿದೆ. ಅವನು ಕನ್ನಡ ಹೊರತುಪಡಿಸಿ ಬೇರೆ ಯಾವುದೇ ವಿಷಯಗಳಲ್ಲಿ ಏನನ್ನೂ ಅರ್ಥಮಾಡಿಕೊಳ್ಳುತ್ತಿಲ್ಲ ಮತ್ತು ನಿಯಮಿತವಾಗಿ ಶಾಲೆಗೆ ಬರಲು ತುಂಬಾ ಹೆದರುತ್ತಿದ್ದ ಎಂದು ಹಂಚಿಕೊಂಡ. ನಾನು ಕನ್ನಡ ಮಾಧ್ಯಮ ಶಾಲೆಯಲ್ಲಿ ಅಧ್ಯಯನ ಮಾಡಿ ನಂತರ ಇಂಗ್ಲೀಷ್ ಮಾಧ್ಯಮಕ್ಕೆ ಬದಲಾಯಿಸಿದ ನನ್ನ ಸ್ವಂತ ಕಥೆಯನ್ನು ಅವನ ಜೊತೆ ಹಂಚಿಕೊಂಡಿದ್ದೇನೆ. ಅದು ಕಷ್ಟ ಎಂದು ನಾನು ತಿಳಿದಿದ್ದೇನೆ ಆದರೆ ಅದು ಸಾಧ್ಯ ಎಂದು ಅವನಿಗೆ ನಾನು ಹೇಳಿದೆ.


ವಿಕ್ರಮ್ ನನ್ನ ತರಗತಿಯಲ್ಲಿ ನಿರರ್ಗಳವಾಗಿ ಹಿಂದಿ ಕವಿತೆಯನ್ನು ಪಠಿಸಿದಾಗ ನನಗೆ ಸಂತೋಷವಾಯಿತು ಮತ್ತು ಆಘಾತವಾಯಿತು. ಮಾತ್ರವಲ್ಲದೇ ಅವನು ತನ್ನ ಅಕ್ಕಪಕ್ಕದವರ ಸಹಾಯವನ್ನು ತೆಗೆದುಕೊಂಡು ಕನ್ನಡದಲ್ಲಿ ಕವಿತೆ ಬರೆದಿದ್ದಾನೆ ಎಂದು ಹೇಳಿದನು. ನಾನು ಆಶ್ಚರ್ಯಚಕಿತನಾದೆನು! ಮೊದಲು ನಾನು ಪ್ರತೀ ಮಗುವಿನಿಂದ ಗೌರವವನ್ನು ನಿರೀಕ್ಷಿಸುತ್ತಿದ್ದೆ. ಮತ್ತು ಅವರಲ್ಲಿ ಭಯವನ್ನು ಬೆಳೆಸುವ ಮೂಲಕ ಅದನ್ನು ಒತ್ತಾಯಿಸುತ್ತಿದ್ದೆ. ಆದರೀಗ, ಪ್ರೀತಿ, (ವ್ಯಾಲಿಡೇಶನ್)ಊರ್ಜಿತಗೊಳಿಸುವಿಕೆ ಮತ್ತು ಪರಾನುಭೂತಿಯ ಮೂಲಕ ಪ್ರತೀ ಮಗುವಿನಿಂದ ಗೌರವವನ್ನು ಪಡೆಯುವುದು ಸುಲಭ ಎಂದು ಈಗ ನಾನು ಅರಿತುಕೊಂಡಿದ್ದೇನೆ.




# ಆದರಿಸಿ ಬೆಳೆಸುವ ಸಾಮರ್ಥ್ಯದ ಮೇಲೆ ಕೇಂದ್ರೀಕರಿಸುವುದು

*2 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 6ನೇ ತರಗತಿಗೆ ವಿಜ್ಞಾನ ಬೋಧಿಸುತ್ತಿರುವ ಶಿಕ್ಷಕಿ*





ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರವು ನನಗೆ ಅನೇಕ ಕಲಿಕೆಗಳನ್ನು ಮತ್ತು ಅನುಭವಗಳನ್ನು ನೀಡಿತು. ನಾನು ಯಾವಾಗಲೂ ಅದನ್ನು ಪಾಲಿಸುತ್ತೇನೆ. ಒಂದು ಅನುಭವವು ಒಂದು ರಂಗಭೂಮಿ ಚಟುವಟಿಕೆಯಾಗಿದ್ದು, ಅಲ್ಲಿ ಗುಂಪಿನಲ್ಲಿರುವ ಇತರರು ನನ್ನ ನಡಿಗೆಗೆ ಪ್ರತಿಬಿಂಬಿಸುತ್ತಾರೆ ಮತ್ತು ನನಗೆ ವಿಶೇಷ ನಡಿಗೆ ಇದೆ ಎಂದು ಹೇಳಿದರು. ಇದು ನನಗೆ 'ಆಶ್ಚರ್ಯಕರ' ಕ್ಷಣವಾಗಿದೆ. ಯಾಕೆಂದರೆ ನನಗಿದು ವಿಶೇಷವೆನಿಸಿದೆ. ಅಧಿವೇಶನದ ನಂತರ ನಾನು ಅನುಭವದ ಬಗ್ಗೆ ಸಾಕಷ್ಟು ಯೋಚಿಸಿದ್ದೇನೆ. ಕಾರ್ಯಗಾರದಲ್ಲಿ ನಾನು ಮಾಡಿದಂತೆಯೇ ವಿದ್ಯಾರ್ಥಿಗಳಿಗೆ ವಿಶೇಷ ಭಾವನೆ ಮೂಡಿಸಲು ಬಯಸುತ್ತೇನೆ.

ನನ್ನ ತರಗತಿಯಲ್ಲಿ 6ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಸಣ್ಣ ತಿರುವನ್ನು ಹೊಂದಿರುವ ಪ್ರಯೋಗವಾಗಿ ನಾನು ಈ ಚಟುವಟಿಕೆಯನ್ನು ಪ್ರಯತ್ನಿಸಿದೆ. ನಾನು ಒಂದು ಜೋಡಿ ವಿದ್ಯಾರ್ಥಿಗಳನ್ನು ತರಗತಿಯ ಮುಂದೆ ನಿಲ್ಲುವಂತೆ ಕರೆ ಮಾಡಿ ಉಳಿದ ವಿದ್ಯಾರ್ಥಿಗಳಿಗೆ ಅವರಲ್ಲಿರುವ ಸಕಾರಾತ್ಮಕ ಗುಣಗಳನ್ನು ತಿಳಿಸುವಂತೆ ಸೂಚಿಸಿದೆ. ಎಲ್ಲಾ ವಿದ್ಯಾರ್ಥಿಗಳು ತಮ್ಮ ಸಕಾರಾತ್ಮಕ ಗುಣಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದರು. ತರಗತಿಯ ಪ್ರತೀ ಮಗುವಿನಲ್ಲಿ ನಾನು ಸಕಾರಾತ್ಮಕ ಶಕ್ತಿ ಮತ್ತು ಸಂತೋಷವನ್ನು ನೋಡಿದೆ. ಈ ಚಟುವಟಿಕೆಯು ಅವರಲ್ಲಿ ಬೆಳೆಸಿದ ಬಂಧದಿಂದ ನನಗೆ ಆಶ್ಚರ್ಯ ಮತ್ತು ಸಂತೋಷವಾಯಿತು.

ಕಾರ್ಯಗಾರದ ಮೊದಲು ಶಾಲೆಯಲ್ಲಿ ಮಕ್ಕಳು ಮತ್ತು ನನ್ನ ನಡುವೆ ಅಂತರವನ್ನು ಕಾಪಾಡಿಕೊಂಡಿದ್ದೆ. ಯಾಕೆಂದರೆ ಶಿಕ್ಷಕರಾಗಿದ್ದವರು ಹೀಗೆ ಇರಬೇಕೆಂದು ನಾನು ಭಾವಿಸಿದ್ದೆ. ಕಾರ್ಯಗಾರದ ನಂತರ ತರಗತಿಯ ಎಲ್ಲಾ ಮಕ್ಕಳಿಗೆ ಅವಕಾಶವನ್ನು ನೀಡುವ ಮೂಲಕ ಅವರು ಉತ್ತಮವಾಗಿ ಅಭಿವೃದ್ಧಿ ಹೊಂದುತ್ತಾರೆ ಎಂದು ನಾನು ಕಲಿತಿದ್ದೇನೆ. ನನ್ನ ತರಗತಿಯ ಪ್ರತಿ ಮಗುವನ್ನು ನಾನು ಪ್ರಶಂಸಿಸಲು ಪ್ರಾರಂಭಿಸಿದೆ ಮತ್ತು ಮನೆ ಪಠ್ಯವನ್ನು ಕಲಿಯಲು ಮತ್ತು ಪೂರ್ಣಗೊಳಿಸಲು ಅವಕಾಶವನ್ನು ನೀಡಲು ಪ್ರಾರಂಭಿಸಿದೆ. ಈಗ ನಾನು ಕೋಪಗೊಳ್ಳುವುದಿಲ್ಲ. ಅವರ ಕಾರ್ಯಗಳ ಹಿಂದಿನ ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಗೌರವಿಸಲು ನಾನು ಕಲಿತಿದ್ದೇನೆ.



# ಮಕ್ಕಳ ವರ್ತನೆಯನ್ನು ವಿಸಂಕೇತಿಸುವ ಮೂಲಕ ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು

*1 ವರ್ಷದ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 1ನೇ ತರಗತಿಗೆ ಎಲ್ಲಾ ವಿಷಯಗಳನ್ನು ಕಲಿಸುವುದು*

ನನ್ನ ತರಗತಿಯಲ್ಲಿ ಮಕ್ಕಳನ್ನು ನಿಯಂತ್ರಿಸುವುದು ಯಾವಾಗಲೂ ನನ್ನ ಒತ್ತಡಕ್ಕೆ ಕಾರಣವಾಗಿತ್ತು. ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ನಾನು ಭಾಗವಹಿಸಿದಾಗ ಮಗುವಿನ ಪ್ರತಿಯೊಂದು ಕ್ರಿಯೆಯ ಹಿಂದೆ ಒಂದು ಕಾರಣ ಇದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಪ್ರತಿ ಮಗುವಿಗೆ ಅನುಭೂತಿ ಮತ್ತು ಗೌರವವನ್ನು ತೋರಿಸಿದಾಗ ನಾನು ಅವನು/ಅವಳೊಂದಿಗೆ ಸಂಬಂಧವನ್ನು ಬೆಳೆಸಲು ಪ್ರಾರಂಭಿಸಬಹುದು ಎಂದು ನನಗೆ ಅರ್ಥವಾಯಿತು. ನಿಧಾನವಾಗಿ ಮಕ್ಕಳ ವಿಧಾನದಲ್ಲಿ ಬದಲಾವಣೆಯನ್ನು ನಾನು ಗಮನಿಸಿದೆ. ಒಮ್ಮೆ, "ಪೋಷಕರೊಂದಿಗೆ ಉದ್ಯಾನಕ್ಕೆ ಹೋಗುವುದು" ಮತ್ತು "ಶಾಲೆಗೆ ಸಿದ್ಧವಾಗುವುದು" ಮುಂತಾದ ವಿಷಯಗಳಿಗಾಗಿ ನಾನು ಪಾತ್ರದ ಆಟಗಳನ್ನು ಯೋಜಿಸಿದೆ. ಪೋಷಕರೊಂದಿಗೆ ಅವರ ಸಂಭಾಷಣೆ ಮತ್ತು ನಡವಳಿಕೆಯ ಅನುಭವವನ್ನು ರಚಿಸಲು ನಾನು ಯೋಚಿಸಿದೆ. ನಾನು ಮಗುವಿನ ಪಾತ್ರವನ್ನು ಮತ್ತು ಮಕ್ಕಳು ಪೋಷಕರ ಪಾತ್ರವನ್ನು ನಿಭಾಯಿಸಿದ್ದಾರೆ. ಪೋಷಕರಾಗಿ ಅವರು ನನ್ನ ಮನವೊಲಿಸಲು ತಮ್ಮ ಪಾತ್ರವನ್ನು ಎಷ್ಟು ಸುಂದರವಾಗಿ ನಿರ್ವಹಿಸಲು ಪ್ರಯತ್ನಿಸುತ್ತಿದ್ದಾರೆಂದು ನಾನು ನೋಡಿದೆ. ಪಾತ್ರದ ಆಟದ ನಂತರ ನಾವು ಪ್ರತಿಫಲನ ವಲಯವನ್ನು ಹೊಂದಿದೆವು. ಮಕ್ಕಳು ಹೊಂದಿದ್ದ ಉತ್ತಮ ಕಲಿಕೆಗಳನ್ನು ನೋಡಿ ನನಗೆ ಆಶ್ಚರ್ಯವಾಯಿತು ಮತ್ತು ಅವರು ತಮ್ಮ ಹೆತ್ತವರಿಗೆ ತೊಂದರೆ ಕೊಡುವುದಿಲ್ಲ ಎಂದು ಭರವಸೆ ನೀಡಿದರು.

ತರಬೇತಿಯ ನಂತರ ಮಕ್ಕಳ ಬಗೆಗಿನ ನನ್ನ ಗ್ರಹಿಕೆಯಲ್ಲಿ ಭಾರಿ ಬದಲಾವಣೆಯಾಗಿದೆ. 2ನೇ ತರಗತಿಯ ಕೆಲವು ವಿದ್ಯಾರ್ಥಿಗಳ ಪೋಷಕರಿಗೆ ಅವರು ಮಂದ ವಿದ್ಯಾರ್ಥಿಗಳು ಎಂದು ಹೇಳಿದ್ದು ನನಗೆ ನೆನಪಿದೆ. ಸ್ವಲ್ಪ ಆತ್ಮಾವಲೋಕನ ಮಾಡಿದ ನಂತರ, ನಾನು ಈ ಮಕ್ಕಳನ್ನು 'ಮಂದ' ಎಂದು ಲೇಬಲ್ ಮಾಡಿದ್ದೇನೆ ಎಂದು ನನಗೆ ಅರಿವಾಯಿತು. ನಾನು ತಪ್ಪಿತಸ್ಥಳೆಂದು ಭಾವಿಸಿದೆ ಮತ್ತು ಈ ಮಕ್ಕಳನ್ನು ತರಗತಿಯ ಹೊರಗೆ ಕರೆದೊಯ್ದು ಅವರ ಸಮಸ್ಯೆಗಳನ್ನು ಮತ್ತು ಅವರ ಭಾವನಾತ್ಮಕ ಪ್ರಕ್ಷುಬ್ಧತೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಅವರನ್ನು ಪ್ರೇರೇಪಿಸಿದ ನಂತರ ಅವರ ಕಲಿಕೆಯಲ್ಲಿ ಸುಧಾರಣೆ ಕಾಣುವಂತಾಯಿತು.









# ಪ್ರತಿ ಮಗುವಿಗೂ ಅವಕಾಶವನ್ನು ನೀಡುವುದು

*9 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 7ನೇ ತರಗತಿಗೆ ವಿಜ್ಞಾನ ಬೋಧಿಸುತ್ತಿರುವ ಶಿಕ್ಷಕ*

ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರವು ನಾನು ಭಾಗವಹಿಸಿದ ಇತರ ತರಬೇತಿಗಳಿಗಿಂತ ಹೆಚ್ಚಿನದನ್ನು ನೀಡಿದೆ. ಕಾರ್ಯಗಾರದಲ್ಲಿ ಭಾಗವಹಿಸಿದ ಪ್ರತಿಯೊಬ್ಬರನ್ನು ಗೌರವಿಸಲಾಯಿತು. ಸುಗಮಗಾರರು ರಚಿಸಿದ ವಾತಾವರಣದಿಂದ ನಾನು ಮುಳುಗಿಹೋಗಿದ್ದೆ. ಭಾಗವಹಿಸುವ ಎಲ್ಲರಿಗೂ ಮುಕ್ತವಾಗಿ ಮತ್ತು ಆರಾಮವಾಗಿ ಹಂಚಿಕೊಳ್ಳಲು ಅವರು ಅವಕಾಶ ಮತ್ತು ಸುರಕ್ಷಿತ ಸ್ಥಳವನ್ನು ರಚಿಸಿದ್ದಾರೆ. ಸುಗಮಗಾರರು ಭಾಗವಹಿಸುವವರನ್ನು ಸ್ವಾಗತಾರ್ಹ ಮತ್ತು ನಿರ್ಣಯಿಸದ ಸ್ವರದಲ್ಲಿ ಆಹ್ವಾನಿಸುತ್ತಾರೆ. ಮತ್ತು ನಾವು ಪ್ರತಿಕ್ರಿಯಿಸಲು ಸಾಕಷ್ಟು ಸಮಯವನ್ನು ನಮಗೆ ನೀಡಿದ್ದಾರೆಂದು ನಾನು ಗಮನಿಸಿದ್ದೇನೆ.

ವಿಜ್ಞಾನ ಶಿಕ್ಷಕನಾಗಿ ಮರುದಿನ "ಎಲೆಕ್ಟ್ರಿಕ್ ಸರ್ಕ್ಯೂಟ್‌ನಲ್ಲಿ" ಡೆಮೋ ನೀಡಲು ತಯಾರಾಗಬೇಕೆಂದು ಮಕ್ಕಳಿಗೆ ಸೂಚನೆ ನೀಡಿದ್ದೆ. ಮರುದಿನ, ಎಂದಿನಂತೆ ಒಬ್ಬ ಅದ್ಭುತ ಹುಡುಗ ತನ್ನ ಡೆಮೋ ಅಧಿವೇಶನವನ್ನು ಮೊದಲು ಮಾಡಬೇಕೆಂದು ನಾನು ನಿರೀಕ್ಷಿಸುತ್ತಿದ್ದೆ. ಪ್ರತಿ ಪಾಲ್ಗೊಳ್ಳುವವರಿಗೆ ಅವಕಾಶ ನೀಡುವಲ್ಲಿ ಸುಗಮಗಾರರ (ಫೆಸಿಲಿಟೇಟರ್) ವಿಧಾನವನ್ನು ನಾನು ಒಂದು ಕ್ಷಣ ನೆನಪಿಸಿಕೊಂಡೆ. ಆಕಸ್ಮಿಕವಾಗಿ ನಾನು ಇನ್ನೊಬ್ಬ ವಿದ್ಯಾರ್ಥಿನಿಯನ್ನು ಕರೆದೆ, ಆಕೆ ಸರಾಸರಿ ವಿದ್ಯಾರ್ಥಿಯಾಗಿದ್ದಳು ಮತ್ತು ಮುಂದೆ ಬರಲು ಹಿಂಜರಿಯುತ್ತಿದ್ದಳು. ನಾನು ವಿದ್ಯಾರ್ಥಿನಿಯನ್ನು ಪ್ರೇರೇಪಿಸಿದೆ ಮತ್ತು ವೇದಿಕೆಯಲ್ಲಿ ಬರಲು ಸಾಕಷ್ಟು ಸಮಯವನ್ನು ನೀಡಿದೆ. ನನ್ನ ಆಶ್ಚರ್ಯಕ್ಕೆ ಅವಳು ಮುಂದೆ ಬಂದು ಅದ್ಭುತ ಡೆಮೋ ಕೊಟ್ಟಳು! ಅವಳ ಪ್ರಸ್ತುತಿಯಿಂದ ನನಗೆ ಆಘಾತವಾಯಿತು. ಈ ದಿನದಂದು ನಾನು ಮಕ್ಕಳ ಬಗ್ಗೆ ನನ್ನಷ್ಟಕ್ಕೆ ತೀರ್ಮಾನಿಸುತ್ತೇನೆ ಎಂದು ನಾನು ಅರಿತುಕೊಂಡೆ.

ನನ್ನ ಅತೀ ದೊಡ್ಡ ಕಲಿಕೆಯೆಂದರೆ, ಶಿಕ್ಷಕನಾಗಿ ನನ್ನ ಪಾತ್ರದಲ್ಲಿ ತರಗತಿಯ ಎಲ್ಲಾ ಮಕ್ಕಳಿಗೆ ತಮ್ಮನ್ನು ತಾವು ವ್ಯಕ್ತಪಡಿಸಲು ಸ್ಥಳ, ಅವಕಾಶ ಮತ್ತು ಸಮಯವನ್ನು ನೀಡುವುದು ನನ್ನ ಜವಾಬ್ದಾರಿ ಎಂದು ಅರಿತುಕೊಂಡೆ.



# ಮಕ್ಕಳೊಂದಿಗೆ ಸಂಪರ್ಕ ಸಾಧಿಸುವಲ್ಲಿ ಭಾಷೆ ತೊಡಕಾಗದೆ ಇರುವಂತೆ ನೋಡಿಕೊಳ್ಳುವುದು

*3 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 2ನೇ ತರಗತಿಗೆ ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕಿ*



ನೈಸರ್ಗಿಕ ಸೌಂದರ್ಯದ ಅರುಣಾಚಲ ಪ್ರದೇಶ ನನ್ನ ತವರು ರಾಜ್ಯ; ಇಂಗ್ಲೀಷ್ ಮತ್ತು ಪರಿಸರ ವಿಜ್ಞಾನವನ್ನು ಕಲಿಸಲು ನಾನು ಬೆಂಗಳೂರಿಗೆ ಬಂದೆ. ನನಗೆ ಕನ್ನಡ ಗೊತ್ತಿಲ್ಲದ ಕಾರಣ ನನ್ನ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ಸಂವಹನ ಮಾಡುವುದು ಒಂದು ಸವಾಲಾಗಿದೆ. ನನ್ನ ವಿದ್ಯಾರ್ಥಿಗಳಲ್ಲಿ ಒಬ್ಬಳಾದ ಶಿವಾನಿ ತಾನಾಗಿ ಶಾಂತಗೊಳ್ಳುವ ಮೊದಲು ಸುಮಾರು ಒಂದು ಗಂಟೆ ಅಳುತ್ತಾಳೆ ಮತ್ತು ಕಿರುಚುತ್ತಾಳೆ. ಕೆಲವೊಮ್ಮೆ ಅವಳು ತನ್ನ ತುಟಿಗಳನ್ನು ತುಂಬಾ ಕಠಿಣವಾಗಿ ಕಚ್ಚುತ್ತಾಳೆ. ಅಲ್ಲಿ ರಕ್ತ ಸ್ರಾವವಾಗುತ್ತದೆ. ಶಿವಾನಿಗೆ ಶಾಲೆಯಲ್ಲಿರಲು ಇಷ್ಟವಿರುವುದಿಲ್ಲ. ಶಿವಾನಿಯ ತಾಯಿ ಮತ್ತು ಶಿಕ್ಷಕರು ತುಂಬಾ ಅಸಹಾಯಕರಾಗಿದ್ದರು.

ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರವು ಮಕ್ಕಳ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ನನಗೆ ಸಹಾಯ ಮಾಡಿತು. ಮತ್ತು ನನ್ನ ಆತಂರಿಕ ಶಕ್ತಿಯ ಬಗ್ಗೆ ಒಳನೋಟವನ್ನು ನೀಡಿತು. ಶಿವಾನಿಯ ನಡವಳಿಕೆಯು ನನಗೆ ಬಹಿರಂಗವಾಗುತ್ತಿತ್ತು. ಯಾಕೆ ಅವಳು ಶಾಲೆಯಲ್ಲಿರಲು ಇಷ್ಟಪಡುವುದಿಲ್ಲ ಎಂದು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ನನ್ನ ಸಹೋದ್ಯೋಗಿಗಳ ಸಹಾಯದಿಂದ ನಾನು ಅವಳನ್ನು ತಲುಪಲು ಪ್ರಯತ್ನಿಸಿದೆ ಆದರೆ ಅದು ವ್ಯರ್ಥವಾಯಿತು. ನಾನು ಅವಳೊಂದಿಗೆ ಅವಳ ಜೀವನದ ಬಗ್ಗೆ ಮಾತಾನಾಡಲು ನಿರ್ಧರಿಸಿದೆ. ಮತ್ತು ಅವಳ ತಾಯಿಯ ಮೊಬೈಲ್ ಫೋನ್ ಅವಳ ಅತ್ಯುತ್ತಮ ಸ್ನೇಹಿತ ಎಂದು ತಿಳಿದುಬಂತು. ಅವಳು ಸ್ನೇಹಿತರನ್ನು ಹೊಂದಿರಲಿಲ್ಲ ಮತ್ತು ಒಂಟಿಯಾಗಿದ್ದಳು. ಒಮ್ಮೆ ನನ್ನ ಮೊಬೈಲಿನ ಆಟದಲ್ಲಿ ಮುಂದಿನ ಹಂತವನ್ನು ತಲುಪಲು ಸಹಾಯಮಾಡಲು ನಾನು ಶಿವಾನಿಯನ್ನು ಕೇಳಿದೆ. ಆಗ ಅವಳ ಕಣ್ಣುಗಳು ಮಿಂಚುತ್ತಿರುವುದನ್ನು ನಾನು ನೋಡಿದೆ. ಮತ್ತು ಅವಳು "ಕಾರು ಗೇಮ್" ಆಡಲು ಇಷ್ಟಪಡುತ್ತೇನೆ ಎಂದು ಹೇಳಿದಳು! ಅವಳು ಫೋನಿನಲ್ಲಿ ಆಡುವ ಆಟಗಳಿಗೆ ವ್ಯಸನಿಯಾಗಿದ್ದಳು. ನಾನು ಶಿವಾನಿಯ ತಾಯಿಯೊಂದಿಗೆ ಸಮಸ್ಯೆಯನ್ನು ಚರ್ಚಿಸಿದೆ. ಮತ್ತು ಆಟ ಮತ್ತು ಆಧ್ಯಯನದ ನಡುವೆ ಸಮಯವನ್ನು ಸಮತೋಲನಗೊಳಿಸಲು ಕೆಲವು ಸಲಹೆಗಳನ್ನು ನೀಡಿದ್ದೇನೆ. ಮಕ್ಕಳೊಂದಿಗೆ ಸಂಪರ್ಕ ಸಾಧಿಸಲು ಮತ್ತು ಅವರ ಸಮಸ್ಯೆಗಳಿಗೆ ಮೂಲಕಾರಣಗಳನ್ನು ಕಂಡುಹಿಡಿಯಲು ನಾನು ಈಗ ಸಂಪೂರ್ಣ ಅಧಿಕಾರ ಹೊಂದಿದ್ದೇನೆ.



# ಕನಸಿನ ಶಾಲೆಗಾಗಿ ಸಾಮೂಹಿಕವಾಗಿ ಕೆಲಸ ಮಾಡುವುದು

*6 ವರ್ಷಗಳ ಅನುಭವದೊಂದಿಗೆ ಕಡಿಮೆ ಶಾಲಾ ಶುಲ್ಕದ ಖಾಸಗಿ ಶಾಲೆಯಲ್ಲಿ 9-10 ತರಗತಿಗಳಿಗೆ ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕಿ*

ಡ್ರೀಮ್ ಎ ಡ್ರೀಮ್ ನಡೆಸಿದ ಕಾರ್ಯಗಾರದಲ್ಲಿ ಭಾಗವಹಿಸುವವರೆಲ್ಲರೂ ತಮ್ಮ ಸ್ವಂತ ಸಾಮರ್ಥ್ಯವನ್ನು ಅನ್ವೇಷಿಸಲು ಸುಗಮಗಾರರು ಒಂದು ವಾತಾವರಣವನ್ನು ರಚಿಸಿದ್ದಾರೆ. ಕಾರ್ಯಗಾರಗಳು ಚಾರ್ಟ್‌ಗಳನ್ನು ಬಳಸುವ ಸೌಂದರ್ಯವನ್ನು ನಮಗೆ ಬಹಿರಂಗಗೊಳಿಸಿದವು ಮತ್ತು ಆ ಚಾರ್ಟ್‌ಗಳಲ್ಲಿ ನಾವೇ ಕೆಲಸ ಮಾಡಿದ್ದೇವೆ. ನನ್ನ ಬಿ.ಎಡ್ ಸಮಯದಲ್ಲಿ ಚಾರ್ಟ್‌ಗಳನ್ನು ರಚಿಸಲು ವೃತ್ತಿಪರರಿಗೆ ಹಣ ಪಾವತಿಸುತ್ತಿದ್ದದ್ದು ನನಗೆ ನೆನಪಿದೆ. ಈ ಚಾರ್ಟ್‌ಗಳನ್ನು ನನ್ನದೇ ಆದ ಸಾಮರ್ಥ್ಯದಲ್ಲಿ ಮಾಡುವ ಸಂದರ್ಭ ನನಗೆ ಎಂದಿಗೂ ಸಂಭವಿಸಿಲ್ಲ. ದೃಶ್ಯೀಕರಣ ಚಟುವಟಿಕೆಯು ನನ್ನ ಆಲೋಚನಾ ಪ್ರಕ್ರಿಯೆಯನ್ನು ಮಾರ್ಪಡಿಸಿತು. ಮತ್ತು ಮಗುವಿಗೆದೊಡ್ಡವರಿಂದ ಏನು ಬೇಕು ಎಂದು ನನಗೆ ಅರಿವಾಯಿತು. ಸಹಾನುಭೂತಿ ಮತ್ತು ಅವರನ್ನು ಯಾವುದೇ ನಿರ್ಣಯವಿಲ್ಲದೇ ಒಪ್ಪಿಕೊಳ್ಳುವುದು. ಈ ಮೂಲಕ ನನ್ನ ಕನಸಿನ ಶಾಲೆಯನ್ನು ದೃಶ್ಯೀಕರಿಸಿದೆ.

ಕಾರ್ಯಗಾರದ ನಂತರ ನಾನು ನನ್ನ ವಿದ್ಯಾರ್ಥಿಗಳೊಂದಿಗೆ ಈ ಚಟುವಟಿಕೆಯನ್ನು ಮಾಡಿದ್ದೇನೆ. ವಿದ್ಯಾರ್ಥಿಗಳು ತಮ್ಮ ಪ್ರಾಮಾಣಿಕತೆ ಮತ್ತು ಧೈರ್ಯದಿಂದ ನನ್ನನ್ನು ಆಶ್ಚರ್ಯಗೊಳಿಸಿದರು. ಅವರು ಪ್ರತಿ ಮಹಡಿಯಲ್ಲಿ ಕುಡಿಯುವ ನೀರು, ತರಗತಿಗಳಿಗೆ ಸರಿಯಾದ ಬಾಗಿಲುಗಳು, ಕೆಲಸ ಮಾಡುವ ಸೀಲಿಂಗ್ ಫ್ಯಾನ್‌ಗಳು ಮತ್ತು ಪ್ರತಿ ತರಗತಿಗೆ ಸಿಸಿಟಿವಿ ಕ್ಯಾಮೆರಾಗಳನ್ನು ಕೇಳಿದರು. ನಾನು ಅವರ ಎಲ್ಲಾ ಅಗತ್ಯಗಳನ್ನು ಶಾಲಾ ಆಡಳಿತ ಮಂಡಳಿಗೆ ಹಂಚಿಕೊಂಡಿದ್ದೇನೆ. ಆಡಳಿತ ಮಂಡಳಿ ಈ ಅವಶ್ಯಕತೆಗಳನ್ನು ಆಳವಾಗಿ ಮನಗಂಡರು ಮತ್ತು ಆ ಬೇಡಿಕೆಗಳನ್ನು ಮೆಚ್ಚಿದರು. ಶಾಲೆಯ ಪ್ರತಿಯೊಂದು ಮಹಡಿಯಲ್ಲಿ ಕುಡಿಯುವ ನೀರು ಮತ್ತು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ವ್ಯವಸ್ಥಾಪಕರು ತಕ್ಷಣದ ಕ್ರಮಗಳನ್ನು ಕೈಗೊಂಡರು.

ಈ ಸಣ್ಣ ಕೃತ್ಯದ ಮೂಲಕ, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಗಳು ಪರಸ್ಪರ ಅರ್ಥಮಾಡಿಕೊಳ್ಳುವಲ್ಲಿ ಬಲವಾದ ಬಂಧವನ್ನು ಬೆಳೆಸಿಕೊಂಡಿರುವುದನ್ನು ನಾನು ಗಮನಿಸಿದೆ. ನನ್ನ ವಿದ್ಯಾರ್ಥಿಗಳಿಗೆ ಕಲಿಸಲು ಮತ್ತು ಅವರ ಜೀವನದಲ್ಲಿ ಅವರಿಗೆ ಅಗತ್ಯವಿರುವ ಸಹಾನುಭೂತಿಯನ್ನು ತೋರಿಸುವ ದೊಡ್ಡವರಾಗಿ ನನ್ನ ಸಾಮರ್ಥ್ಯಗಳ ಬಗ್ಗೆ ನನಗೆ ಹೆಚ್ಚು ವಿಶ್ವಾಸವಿದೆ.





# OUR SUPPORTERS FOR THE PAST 3 YEARS

ಡ್ರೀಮ್ ಎ ಡ್ರೀಮ್
No. 398/E, 17th ಕ್ರಾಸ್, 9th ಮುಖ್ಯ ರಸ್ತೆ, 3rd ಬ್ಲಾಕ್,  ಜಯನಗರ, ಬೆಂಗಳೂರು - 560011

+91.80.40951084 | info@dreamadream.org | www.dreamadream.org